ಈ)	ಕಡಿಮೆ ಗುರಿ ಕೊಟ್ಟಿದ್ದರಿಂದ, ರೈತರಿಗೆ ಸೂಕ್ತ ಸಹಾಯಧನ ಸಿಗದೇ ಸಂಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಕಡಿಮೆ ಅನುದಾನ ನಿಗದಿಪಡಿಸಿರುವ ಕಾರಣ ತೊಂದರೆಯಾಗಿರುತ್ತದೆ.
ಉ)	ಬಂದಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಹೆಚ್ಚಿನ ಗುರಿ ಕಲ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.?	2018-19ನೇ ಸಾಲಿಗೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಹೆಚ್ಚುವರಿಯಾಗಿ ಅನುದಾನ ನೀಡುವ ಸಂಬಂಧ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಸಂ: ಪಸಂಮೀ 195 ಸಲೆವಿ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 156 ಪಸಸೇ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 19.12.2018

ಇವರಿಂದ :-
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ :-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ಸುವರ್ಣ ವಿಧಾನ ಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ.ಕೆ.ಸುಧಾಕರ್ (ಚಿಕ್ಕಬಳ್ಳಾಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2232 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ.ಕೆ.ಸುಧಾಕರ್ (ಚಿಕ್ಕಬಳ್ಳಾಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2232 ಕ್ಕೆ ಕನ್ನಡ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ. ಧನಂಜಯ) 19/12/18
ಪೀಠಾಧಿಕಾರಿ-2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ-ಎ)
19/12/18

ಪ್ರತಿ:

ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ಸುವರ್ಣಸೌಧ, ಬೆಳಗಾವಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2232
ಸದಸ್ಯರ ಹೆಸರು : ಡಾ.ಕೆ.ಸುಧಾಕರ್ (ಚಿಕ್ಕಬಳ್ಳಾಪುರ)
ಉತ್ತರಿಸುವ ದಿನಾಂಕ : 21.12.2018
ಉತ್ತರಿಸುವ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದ ಗ್ರಾಮೀಣ ಭಾಗಗಳಲ್ಲಿ ನೂತನ ಪಶು ಆಸ್ಪತ್ರೆಗಳನ್ನು ತೆರೆಯುವ ಯೋಜನೆಗಳಿವೆಯೇ: ಇದ್ದಲ್ಲಿ, ಸಮಗ್ರ ಮಾಹಿತಿ ನೀಡುವುದು:	2018-19ನೇ ಸಾಲಿನಲ್ಲಿ ನೂತನವಾಗಿ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸುವ ಯಾವುದೇ ಯೋಜನೆ ಇರುವುದಿಲ್ಲ.
ಆ)	ಕಳೆದ ಮೂರು ವರ್ಷಗಳಿಂದ ಹೊಸ ಪಶು ಆಸ್ಪತ್ರೆಗಳು ಮಂಜೂರಾಗದೇ ಇರಲು ಕಾರಣವೇನು; (ವಿವರ ನೀಡುವುದು)	ರಾಜ್ಯದಲ್ಲಿ ಒಟ್ಟು 4212 ಪಶುವೈದ್ಯ ಸಂಸ್ಥೆಗಳಿದ್ದು ಒಟ್ಟು ಜಾನುವಾರುಗಳ ಸಂಖ್ಯೆ: 1,50,20,360 ಇರುತ್ತದೆ. ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನನ್ವಯ ಪ್ರತಿ 5000 ಜಾನುವಾರು ಘಟಕಗಳಿಗೆ ಕನಿಷ್ಟ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗಿರುತ್ತದೆ. ಜಾನುವಾರು ಘಟಕಗಳ ಅನುಸಾರ ರಾಜ್ಯದಲ್ಲಿ ಒಟ್ಟಾರೆ 3004 ಪಶುವೈದ್ಯ ಸಂಸ್ಥೆ ಇರಬೇಕಾಗಿದ್ದು, ಪ್ರಸ್ತುತ 3002 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. 2017-18ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಇಲಾಖೆಯ ಒಟ್ಟಾರೆ 1512 ಪ್ರಾಥಮಿಕ ಪಶುಚಿಕಿತ್ಸಾಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 278 ಪಸಸೇ 2016, ದಿನಾಂಕ:09.10.2017 ಅನ್ವಯು ಹಂತ ಹಂತವಾಗಿ ಕ್ರಮವಹಿಸಲಾಗಿದೆ. ರಾಜ್ಯದಲ್ಲಿರುವ ಎಲ್ಲಾ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಆದ್ಯತೆ ನೀಡಿರುವ ಪ್ರಯುಕ್ತ ಹೊಸ ಪಶುಚಿಕಿತ್ಸಾಲಯ ತೆರೆಯುವ ಕಾರ್ಯಕ್ರಮ ಇರುವುದಿಲ್ಲ.
ಇ)	ಜಾನುವಾರುಗಳಿಗೆ ತಗಲುವ ಕಾಲುಬಾಯಿ ಜ್ವರ ಇನ್ನಿತರ ಖಾಯಿಲೆಗಳಿಂದ ಸಾವನಪ್ಪುತ್ತಿರುವ ಜಾನುವಾರುಗಳಿಗೆ ಎಷ್ಟು ಪರಿಹಾರ ನೀಡಲಾಗಿದೆ;	ಕಾಲುಬಾಯಿ ರೋಗ ಮತ್ತು ಇನ್ನಿತರೆ ಖಾಯಿಲೆ ಹಾಗೂ ಆಕಸ್ಮಿಕವಾಗಿ ಸಾವನ್ನಪ್ಪುತ್ತಿರುವ ಜಾನುವಾರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 81 ಪಪಾಯೋ 2017 ಬೆಂಗಳೂರು ದಿನಾಂಕ: 28.10.2017 ರಿಂದ ರೂ. 10,000/- ಗರಿಷ್ಟ ಮಿತಿಗೊಳಪಟ್ಟು ವಿಮೆಗೊಳಪಡಿಸದ ಜಾನುವಾರುಗಳಿಗೆ ನೀಡಲಾಗುತ್ತಿದೆ. 2017-18 ನೇ ಸಾಲಿನಲ್ಲಿ 2659 ಜಾನುವಾರುಗಳ ಸಾವಿಗೆ ರೂ.2.66 ಕೋಟಿ ಪರಿಹಾರ ಧನವನ್ನು ಮತ್ತು 2018-19 ನೇ ಸಾಲಿನಲ್ಲಿ 2925 ಜಾನುವಾರುಗಳ ಸಾವಿಗೆ ರೂ.2.91 ಕೋಟಿ ಪರಿಹಾರ ನೀಡಲಾಗಿದೆ.

ಈ)	ಈಗಾಗಲೇ ಸಾವನಪ್ಪಿರುವ ಜಾನುವಾರುಗಳಿಗೆ ಕಳೆದ ಮೂರು ವರ್ಷಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆಗೆ ಪಾವತಿಸಿರುವ ಪರಿಹಾರ ಎಷ್ಟು? (ವಿಧಾನ ಸಭಾವಾರು ವಿವರ ನೀಡುವುದು)?	ವಿಮೆಗೆ ಒಳಪಡದ ಎತ್ತು/ ಹಸು/ ಹೋರಿ/ ಕೋಣ/ ಎಮ್ಮೆ/ ಕಡಸು/ ಮಣಕಗಳು (ಆರು ತಿಂಗಳು ಮೇಲ್ಪಟ್ಟು), ಆಕಸ್ಮಿಕವಾಗಿ ಮೃತಪಟ್ಟ ಸಂದರ್ಭದಲ್ಲಿ ಮಾರುಕಟ್ಟೆ ಮೌಲ್ಯದನುಸಾರ ಗರಿಷ್ಠ ರೂ. 10,000/- ಮಿತಿಯೊಳಗೆ ಪರಿಹಾರಧನವನ್ನು ನೀಡುವ ಯೋಜನೆಯು ಆಗಸ್ಟ್ 2017-18 ನೇ ಸಾಲಿನಿಂದ ಜಾರಿಯಲ್ಲಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮರಣ ಹೊಂದಿರುವ ಜಾನುವಾರುಗಳಿಗೆ ಈ ಕೆಳಕಂಡಂತೆ ಪರಿಹಾರ ಒದಗಿಸಲಾಗಿದೆ.

[ರೂ ಲಕ್ಷಗಳಲ್ಲಿ]

ವಿಧಾನಸಭಾ ಕ್ಷೇತ್ರವಾರು	2017-18 ಪರಿಹಾರಧನ ಪಾವತಿಸಿರುವುದು		2018-19 ಪರಿಹಾರಧನ ಪಾವತಿಸಿರುವುದು	
	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
ಬಾಗೇಪಲ್ಲಿ	42	4.20	33	3.30
ಚಿಕ್ಕಬಳ್ಳಾಪುರ	24	2.40	40	4.00
ಚಿಂತಾಮಣಿ	11	1.10	31	3.10
ಗೌರೀಬಿದನೂರು	59	5.87	36	3.60
ಶಿಡ್ಲಘಟ್ಟ	16	1.60	33	3.30
ಒಟ್ಟು	152	15.17	173	17.30

ಸಂ: ಪಸಂಮೀ 156 ಪಸಸೇ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಹಿಂವಕ 1307 ಬಿಸಿಎ/ಬಿಇಟಿ/ಬಿಎಂಎಸ್ 2018

ಕರ್ನಾಟಕ ಸರ್ಕಾರ ಸಚಿವಾಲಯ,
ಸುವರ್ಣಸೌಧ,
ಬೆಳಗಾವಿ, ದಿನಾಂಕ: 19-12-2018

149

U/S
21/12/18

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಸುವರ್ಣಸೌಧ, ಬೆಳಗಾವಿ.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/~~ವಿಧಾನ ಪರಿಷತ್ತು~~,
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:	ಶ್ರೀ/ಶ್ರೀಮತಿ S.R. ವಿಶ್ವನಾಥ್, ಮಾನ್ಯ ವಿಧಾನಸಭೆ/ ವಿಧಾನ ಪರಿಷತ್ತು ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ/ನಿಯಮ ಪ್ರಶ್ನೆ ಸಂಖ್ಯೆ:2336ಕ್ಕೆ ಉತ್ತರಿಸುವ ಕುರಿತು.
ಉಲ್ಲೇಖ:	

--

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀ/ಶ್ರೀಮತಿ S.R. ವಿಶ್ವನಾಥ್ ________ ಮಾನ್ಯ ವಿಧಾನ ಸಭೆ/~~ವಿಧಾನ ಪರಿಷತ್ತು~~ ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ/ ನಿಯಮ ಪ್ರಶ್ನೆ ಸಂಖ್ಯೆ:2336ಕ್ಕೆ ಸಂಬಂಧಿಸಿದಂತೆ ಉತ್ತರದ 150 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಆರ್. ಭಾಸ್ಕರ್),
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2336
ಮಾನ್ಯ ಸದಸ್ಯರ ಹೆಸರು	ಶ್ರೀ ಎಸ್.ಆರ್.ವಿಶ್ವನಾಥ್ (ಯಲಹಂಕ ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	21.12.2018
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ದಿಗೆ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ.	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಜನಾಂಗದವರ ಅಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. **ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ** ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಈ ಕೆಳಕಂಡ ಯೋಜನೆಗಳನ್ನು ರೂಪಿಸಿಸಲಾಗಿದೆ. 1. ಸ್ವಯಂ ಉದ್ಯೋಗ ಸಾಲ ಯೋಜನೆಗಳು. 2. ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ. 3. ಅರಿವು-ಶೈಕ್ಷಣಿಕ ಸಾಲ ಯೋಜನೆ. 4. ಗಂಗಾ ಕಲ್ಯಾಣ ನೀರಾವರಿ ಯೋಜನೆ. 5. ತರಬೇತಿ ಯೋಜನೆ.
ಆ)	ಇಲಾಖೆಯು ಕಳೆದ 3 ವರ್ಷಗಳಿಂದ ವಿವಿಧ ಯೋಜನೆಗಳಡಿ ವರ್ಗವಾರು ನೀಡಿರುವ ಅನುದಾನ ಎಷ್ಟು; (ಮಾಹಿತಿ ನೀಡುವುದು)	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನ ಗೊಳಿಸುತ್ತಿರುವ ಎಲ್ಲಾ ಕಾರ್ಯಕ್ರಮಗಳನ್ನು ಹಿಂದುಳಿದ ವರ್ಗಗಳ ಜನಾಂಗದವರ ಸಮಗ್ರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ವರ್ಗವಾರು ಅನುದಾನವನ್ನು ನಿಗಧಿಪಡಿಸಿರುವುದಿಲ್ಲ. ಕಳೆದ 3 ವರ್ಷಗಳಿಂದ ಅನುಷ್ಠಾನಗೊಳಿಸುತ್ತಿರುವ ಯೋಜನವಾರು ಒದಗಿಸಿರುವ ಅನುದಾನ ಮತ್ತು ವೆಚ್ಚ ಮಾಡಿರುವ ಅನುದಾನದ ಮಾಹಿತಿಯನ್ನು ಅನುಬಂಧ-2 ನೀಡಲಾಗಿದೆ. **ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ** ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿಯೇ ಪ್ರವರ್ಗ-1 ಮತ್ತು 2ಎಗೆ ಶೇ.70ರಷ್ಟು ಹಾಗೂ ಪ್ರವರ್ಗ-3ಎ ಮತ್ತು 3ಬಿಗೆ ಶೇ.30 ಅನುಪಾತದಲ್ಲಿ ಹಂಚಿಕೆ ಮಾಡಿಕೊಂಡು ಸೌಲಭ್ಯ ಒದಗಿಸಲಾಗಿದೆ. ಹಂಚಿಕೆ ವಿವರ ಈ ಕೆಳಕಂಡಂತಿದೆ. (ಲಕ್ಷ ರೂ.ಗಳಲ್ಲಿ)

ಕ್ರ ಸಂ.	ವರ್ಷ	ಆಯವ್ಯಯ	ಪ್ರವರ್ಗ-1 ಮತ್ತು 2ಎಗೆ ಹಂಚಿಕೆ (ಶೇ.70ರಷ್ಟು)	ಪ್ರವರ್ಗ-3 ಮತ್ತು 3ಬಿಗೆ ಹಂಚಿಕೆ (ಶೇ.30ರಷ್ಟು)
1	2015-16	16917.00	11841.9	5075.10
2	2016-17	21917.00	15341.9	6575.10
3	2017-18	37917.00	26541.9	11375.10

..2

ಇ)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಬೆಂಗಳೂರು ನಗರದಲ್ಲಿ ಎಷ್ಟು ವಿದ್ಯಾರ್ಥಿ ನಿಲಯಗಳು ಇವೆ; ಇವುಗಳಲ್ಲಿ ಎಷ್ಟು ವಾಸ್ತವ್ಯ ಸಾಮರ್ಥ್ಯವಿರುತ್ತದೆ; ಹಾಲಿಯಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 51 ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 4715 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಹಾಲಿ 4498 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುತ್ತಾರೆ.
ಈ)	ಯಲಹಂಕ ಕ್ಷೇತ್ರದಲ್ಲಿ ಎಷ್ಟು ವಿದ್ಯಾರ್ಥಿ ನಿಲಯಗಳು ಕಾರ್ಯಚರಣೆಯಲ್ಲಿವೆ; ಹೆಚ್ಚಿನ ವಿದ್ಯಾರ್ಥಿನಿಲಯಗಳ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಯಲಹಂಕ ಕ್ಷೇತ್ರದಲ್ಲಿ ಒಟ್ಟು 3 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತಿದ್ದು. ಹೆಚ್ಚಿನ ವಿದ್ಯಾರ್ಥಿನಿಲಯಗಳಿಗೆ ಬೇಡಿಕೆ ಇರುತ್ತದೆ.
ಉ)	ಬಂದಿದ್ದಲ್ಲಿ, ಮುಂದಿನ ದಿನಗಳಲ್ಲಿ ಕೊರೆತೆಯಿರುವ ಮತ್ತು ಹೊಸದಾಗಿ ವಿದ್ಯಾರ್ಥಿ ನಿಲಯಗಳು ಹಾಗೂ ಹಾಲಿ ಇರುವ ವಿದ್ಯಾರ್ಥಿನಿಲಯಗಳ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಯೋಜನೆಗಳೇನು?	ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನ್ನು ಅವಲಂಬಿಸಿದೆ. ಹಾಲಿ ಇರುವ ವಿದ್ಯಾರ್ಥಿನಿಲಯಗಳಿಗೆ ಆಯ-ವ್ಯಯದಲ್ಲಿ ಪ್ರತಿ ವರ್ಷ ಒದಗಿಸುವ ಅನುದಾನ ಹಾಗೂ ನಿವೇಶನ ಲಭ್ಯತೆಯ ಅನುಸಾರ ಬಾಡಿಗೆ ಕಟ್ಟಡಗಳಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುತ್ತಿದ್ದು, ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆಗನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಆಯ-ವ್ಯಯದ ಲಭ್ಯತೆಯನುಸಾರ ಹಂತಹಂತವಾಗಿ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳಾದ ಟೂಟೈರ್ ಕಾಟ್, ಹಾಸಿಗೆ-ಹೊದಿಕೆ, ಕಂಪ್ಯೂಟರ್, ಯು.ಪಿ.ಎಸ್, ಕಂಪ್ಯೂಟರ್ ಟೇಬಲ್, ಗ್ರಂಥಾಲಯ ಪುಸ್ತಕ, ಗ್ರಂಥಾಲಯ ಅಲ್ಮೆರಾ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ನ್ಯಾಪ್ಕಿನ್ ಡೆಸ್ಟ್ರಾಯರ್ ಯಂತ್ರಗಳು, ಸೋಲಾರ್ ಲೈಟ್, ಸೋಲಾರ್ ವಾಟರ್ ಹೀಟರ್, ಇಂಟರ್‌ನೆಟ್, ದೂರವಾಣಿ, ಡೈನಿಂಗ್ ಟೇಬಲ್, ಸಿ.ಸಿ.ಕ್ಯಾಮೆರಾ, ವಾಟರ್ ಪ್ಯೂರಿಫೈಯರ್ ಇತ್ಯಾದಿ ಅವಶ್ಯಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

ಸಂ: ಹಿಂವಕ 1307 ಬಿಎಂಎಸ್ 2018

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಎಸ್.ಆರ್. ವಿಶ್ವನಾಥ್ (ಯಲಹಂಕ)

ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 2336ಕ್ಕೆ ಅನುಬಂಧ-1

	ಶೈಕ್ಷಣಿಕ ಕಾರ್ಯಕ್ರಮಗಳು
	ವಿದ್ಯಾರ್ಥಿನಿಲಯಗಳ ನಿರ್ವಹಣೆ
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
2	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
3	ಸರ್ಕಾರಿ ಆಶ್ರಮಶಾಲೆಗಳು
4	ಖಾಸಗಿ ಅನುದಾನಿತ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು
5	ಖಾಸಗಿ ಅನುದಾನಿತ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
6	ಖಾಸಗಿ ಅನುದಾನಿತ ಅನಾಥಾಲಯಗಳು
7	ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ
	ವಿದ್ಯಾರ್ಥಿವೇತನ ಕಾರ್ಯಕ್ರಮಗಳು
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
2	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ
3	ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ
4	ಶುಲ್ಕ ಮರು ಪಾವತಿ
5	ಪೂರ್ಣಾವಧಿ ಪಿ.ಎಚ್.ಡಿ ಮಾಡುವ ವಿದ್ಯಾರ್ಥಿಗಳಿಗೆ ಫೆಲೋಷಿಫ್
6	ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ
7	ದೇವರಾಜ ಅರಸು ಪ್ರತಿಭಾ ಪುರಸ್ಕಾರ
8	ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ
9	ಐ.ಐ.ಟಿ, ಐ.ಐ.ಎಂ, ಐ.ಐ.ಎಸ್ಸಿ ಇತ್ಯಾದಿಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಒಂದು ಬಾರಿ ರೂ.2.00 ಲಕ್ಷ ಪ್ರೋತ್ಸಾಹಧನ
	ತರಬೇತಿ ಕಾರ್ಯಕ್ರಮಗಳು
1	ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ
2	ನರ್ಸಿಂಗ್ ತರಬೇತಿ
3	ವಿಶ್ವವಿದ್ಯಾಲಯಗಳಲ್ಲಿನ ಹಿಂದುಳಿದ ವರ್ಗಗಳ ಕೋಶಕ್ಕೆ ಅನುದಾನ
4	ಕಾನೂನು ಪದವೀಧರರಿಗೆ ಶಿಷ್ಯವೇತನ

5	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ
6	ಸೇನೆಗಳಿಗೆ ಆಯ್ಕೆಯಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ತರಬೇತಿ
7	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ
	ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ಅಭಿವೃದ್ಧಿ ಕಾರ್ಯಕ್ರಮಗಳು
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ
2	ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ
3	ಆಶ್ರಮ ಶಾಲೆಗಳ ನಿರ್ವಹಣೆ
4	ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ
5	ಅರಿವು ಮೂಡಿಸುವ ಕಾರ್ಯಕ್ರಮ
6	ಮೂಲಭೂತ ಸೌಕರ್ಯಗಳು
7	ವಸತಿ ಸೌಲಭ್ಯ
8	ನಿವೇಶನ ಹಂಚಿಕೆಗಾಗಿ ಜಮೀನು ಖರೀದಿ
9	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನ ಮಾಡಲಾಗುತ್ತಿರುವ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು
	ವಿವಿಧ ಸಮುದಾಯಗಳ ಅಭಿವೃದ್ಧಿ
1	ಹಿಂದುಳಿದ ವರ್ಗಗಳ ಸಮುದಾಯಗಳು ನಿರ್ಮಿಸುವ ಸಮುದಾಯ ಭವನಗಳಿಗೆ ಸಹಾಯಾನುಧಾನ
2	ದೇವರಾಜ ಅರಸು ಭವನ ನಿರ್ಮಾಣ

****

ಅನುಬಂಧ-2

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಎಸ್.ಆರ್. ವಿಶ್ವನಾಥ್ (ಯಲಹಂಕ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 2336ಕ್ಕೆ ಉತ್ತರ

2017-18ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಒದಗಿಸಿರುವ, ಬಿಡುಗಡೆಯಾಗಿರುವ ಹಾಗೂ ಖರ್ಚು ಮಾಡಿರುವ ಅನುದಾನದ ವಿವರ

ರಾಜ್ಯವಲಯ				(ರೂ. ಲಕ್ಷಗಳಲ್ಲಿ)
ಕ್ರ ಸಂ	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ	ಆಯವ್ಯಯದಲ್ಲಿ ಒದಗಿಸಿರುವ ಮೊತ್ತ	ಬಿಡುಗಡೆಯಾದ ಮೊತ್ತ	ಖರ್ಚು
1	2	3	4	5
1	ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತರಬೇತಿ ಮತ್ತು ದೇವರಾಜ ಅರಸು ಸಂಶೋಧನಾ ಸಂಸ್ಥೆ 2225-03-277-2-08	141.00	141.00	116.54
2	ಅತ್ಯಂತ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಲಿಮಿಟೆಡ್2225-03-102-0-12	10000.00	10000.00	9999.70
3	ವಸತಿ ಶಾಲೆಗಳ ನಿರ್ಮಾಣ ನವೋದಯ ಮಾದರಿ 4225-03-277-2-04	15919.00	15919.00	15919.00
4	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆ 2225-03-277-2-62	18970.00	18970.00	18970.00
5	ವಿವಿಧ ಸಮುದಾಯಗಳ ಅಭಿವೃದ್ಧಿ 2225-03-001-0-05	15525.00	15525.00	15525.00
6	ಹಾಸ್ಟೆಲ್‌ಗಳ ಕಟ್ಟಡ ನಿರ್ಮಾಣ ವಿಶೇಷ ಅಭಿವೃದ್ಧಿ ಯೋಜನೆ 4225-03-277-2-06	27890.00	27890.00	27890.00
7	ತರಬೇತಿ, ಅರಿವು ಮತ್ತು ಪ್ರೋತ್ಸಾಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ 2225-03-277-2-37	5800.00	5800.00	5797.53
8	ಹಿಂ ವ ವಿದ್ಯಾರ್ಥಿಗಳಿಗೆ ಮೆ ನಂ ವಿ ವೇತನ (ಕೇಂ.ಪು.ಯೋ) 2225-03-277-2-51	32625.00	32625.00	25376.72
9	ಹಿಂ ವ ವಿದ್ಯಾರ್ಥಿಗಳಿಗೆ ಮೆ ಪೂ ವಿ ವೇತನ (ಕೇಂ.ಪು.ಯೋ) 2225-03-277-2-52	11250.00	11250.00	11211.82
10	ಹಿಂ.ವ. ವಿದ್ಯಾರ್ಥಿಗಳಿಗೆ ಹೊಸ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭ ಮತ್ತು ನಿರ್ವಹಣೆ 2225-03-277-2-53	17184.00	17184.00	17184.00
11	ಇತರೆ ಹಿಂದುಳಿದ ವರ್ಗಗಳ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ (ಕೇಂ.ಪು.ಯೋ) 4225-03-277-7-01	0.00	0.0000	0.00
12	ಆಹಾರ ಮತ್ತು ವಸತಿ ಸಹಾಯ - ವಿದ್ಯಾಸಿರಿ2225-03-283-0-03	11649.00	11649.00	11648.98
13	ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿಗಳು 2225-03-277-3-11	1044.00	1044.00	976.18
14	ದೇವರಾಜ ಅರಸು ಭವನ ನಿರ್ಮಾಣ 4225-03-283-0-01	1000.00	1000.00	1000.00
15	ಆಡಳಿತ ಮತ್ತು ಮಾರ್ಗದರ್ಶನ 2225-03-001-0-01	434.00	434.00	428.56
16	ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ ಮೊ ದೇ ವ ಶಾಲೆಗಳು 2225-03-277-2-77	439.00	439.00	439.00
	ಒಟ್ಟು	169870.00	169870.00	162483.03
ಜಿಲ್ಲಾವಲಯ				
1	ಮೆಟ್ರಿಕ್ ಪೂರ್ವ ಮತ್ತು ಮೆ ನಂ ವಿ ನಿಲಯ ಸುಧಾರಣೆ 2225-00-103-0-72	863.66	863.66	862.18
2	ಜಿಲ್ಲಾ ಕಛೇರಿ 2225-00-103-0-39	1335.62	1335.62	1318.23
3	ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26	58238.00	58238.00	58189.54
4	ಹೊಲಿಗೆ ತರಭೇತಿ ಕೇಂದ್ರಗಳ ನಿರ್ವಹಣೆ 2225-00-103-0-53	50.20	50.20	48.69
5	ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ 2225-00-103-0-40	1410.00	1410.00	1410.00
6	ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು 2225-00-103-0-74	1066.10	1066.10	1027.54
7	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225-00-103-0-66	8897.30	8897.30	8714.51
8	ವಕೀಲರಿಗೆ ಶಿಷ್ಯವೇತನ 2225-00-103-0-58	218.58	218.58	217.94
9	ವಿದ್ಯಾರ್ಥಿ ನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕ 2225-00-103-0-79	899.70	899.70	877.92

ಕ್ರ ಸಂ	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ	ಆಯವ್ಯಯದಲ್ಲಿ ಒದಗಿಸಿರುವ ಮೊತ್ತ	ಬಿಡುಗಡೆಯಾದ ಮೊತ್ತ	ಖರ್ಚು
1	2	3	4	5
10	ಆಶ್ರಮಶಾಲೆಗಳು 2225-00-103-0-41	372.79	372.79	359.27
11	ಇತರೆ ಹಿಂ ವರ್ಗಗಳಿಗೆ ಶುಲ್ಕ ರಿಯಾಯಿತಿ 2225-00-103-0-28	34908.75	34908.75	33868.95
12	ದೇವರಾಜ ಅರಸು ಜನ್ಮದಿನಾಚರಣೆ 2225-00-103-0-56	30.00	30.00	30.00
13	ಹೊಲಿಗೆ ತರಭೇತಿ ಕೇಂದ್ರಗಳ ನಿರ್ವಹಣೆ 2225-00-103-0-78	191.76	191.76	143.58
14	ಅನಾಥಾಲಯಗಳಿಗೆ ಸಹಾಯಧನ 2225-00-103-0-73	799.34	799.34	567.50
	ಒಟ್ಟು	**109281.80**	**109281.80**	**107635.85**

ಕರ್ನಾಟಕ ಸರ್ಕಾರ

ಸಂಖ್ಯೆ:ಹಿಂವಕ 1296 ಬಿಸಿಎ/ಬಿಇಟಿ/ಬಿಎಂಎಸ್ 2018

ಕರ್ನಾಟಕ ಸರ್ಕಾರ ಸಚಿವಾಲಯ,
ಸುವರ್ಣಸೌಧ,
ಬೆಳಗಾವಿ, ದಿನಾಂಕ: 19-12-2018

157

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಸುವರ್ಣಸೌಧ, ಬೆಳಗಾವಿ.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು,
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:	ಶ್ರೀ/ಶ್ರೀಮತಿ T. ರಘುಮೂರ್ತಿ ,ಮಾನ್ಯ ವಿಧಾನಸಭೆ/ ವಿಧಾನ ಪರಿಷತ್ತು ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ **ಗುರುತಿಲ್ಲದ/ನಿಯಮ ಪ್ರಶ್ನೆ ಸಂಖ್ಯೆ:** 2202 ಕ್ಕೆ ಉತ್ತರಿಸುವ ಕುರಿತು.
ಉಲ್ಲೇಖ:	

--

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀ/ಶ್ರೀಮತಿ T. ರಘುಮೂರ್ತಿ ________, **ಮಾನ್ಯ ವಿಧಾನ ಸಭೆ/ವಿಧಾನ ಪರಿಷತ್ತು ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ/ ನಿಯಮ ಪ್ರಶ್ನೆ ಸಂಖ್ಯೆ:** 2202 ಕ್ಕೆ ಸಂಬಂಧಿಸಿದಂತೆ **ಉತ್ತರದ** 150 **ಪ್ರತಿಗಳನ್ನು** ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಆರ್. ಭಾಸ್ಕರ್),
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2202
ಮಾನ್ಯ ಸದಸ್ಯರ ಹೆಸರು	ಶ್ರೀ ಟಿ.ರಘುಮೂರ್ತಿ (ಚಳ್ಳಕೆರೆ)
ಉತ್ತರಿಸಬೇಕಾದ ದಿನಾಂಕ	21.12.2018
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಕಳೆದ ಮೂರು ವರ್ಷಗಳಿಂದ ಕನಕ ಭವನ, ಶ್ರೀ ಕೃಷ್ಣ ಭವನಗಳ ನಿರ್ಮಾಣಕ್ಕೆ ಎಷ್ಟು ಅನುದಾನ ನೀಡಲಾಗಿದೆ ;	ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಕಳೆದ ಮೂರು ವರ್ಷಗಳಿಂದ ಕನಕ ಭವನ, ಶ್ರೀ ಕೃಷ್ಣ ಭವನಗಳ ನಿರ್ಮಾಣಕ್ಕಾಗಿ ಬಿಡುಗಡೆಯಾಗಿರುವ ಅನುದಾನ ವಿವರವನ್ನು ಅನುಬಂಧದಲ್ಲಿ ನೀಡಿದೆ.
ಆ)	ಪ್ರಸ್ತುತ ಕಾಮಗಾರಿ ಪೂರ್ಣಗೊಳ್ಳದೇ ಇರುವ ವಿವಿಧ ಸಮುದಾಯ ಭವನಗಳು ಎಷ್ಟು; ಪೂರ್ಣಗೊಳಿಸಲು ಅನುದಾನ ಯಾವಾಗ ಬಿಡುಗಡೆ ಮಾಡಲಾಗುವುದು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ಸಂಪೂರ್ಣ ವಿವರ ನೀಡುವುದು;	ಚಳ್ಳಕೆರೆ ವಿಧಾನಸಭಾ ಕ್ಷೇತ್ರಗಲ್ಲಿ ಒಟ್ಟು 39 ಸಮುದಾಯ ಭವನಗಳ ಕಟ್ಟಡಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ. ಇವುಗಳಲ್ಲಿ 26 ಕಾಮಗಾರಿಗಳು ಮುಕ್ತಾಯದ ಹಂತಕ್ಕೆ ಬಂದಿದ್ದು ಇನ್ನು 13 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಮಾರ್ಗಸೂಚಿಗಳಾನುಸಾರ 3 ಕಂತುಗಳಲ್ಲಿ ಅನುದಾನ ಬಿಡುಗಡೆ ಮಾಡುತ್ತಿದ್ದು, ಸಂಘ-ಸಂಸ್ಥೆಗಳು ಸಲ್ಲಿಸುವ ದಾಖಲಾತಿ ಹಾಗೂ ಪ್ರಗತಿಯನ್ನಾಧರಿಸಿ ಲಭ್ಯವಿರುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
ಇ)	ತಾಲ್ಲೂಕು ಮಟ್ಟದ ಸಮುದಾಯ ಭವನಗಳಿಗೆ ಸರ್ಕಾರ ಪ್ರಸ್ತುತ ನಿಗದಿಪಡಿಸಿದ ಮೊತ್ತ ಎಷ್ಟು; ಹೋಬಳಿ ಮತ್ತು ಗ್ರಾಮ ಮಟ್ಟದಲ್ಲಿ ನಿರ್ಮಾಣ ಮಾಡಲು ನಿಗದಿಪಡಿಸಿದ ಮೊತ್ತವೆಷ್ಟು; ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು? (ವಿವರ ಒದಗಿಸುವುದು)	ಸರ್ಕಾರದ ಆದೇಶದಂತೆ ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ ನಿರ್ಮಾಣ ಮಾಡುವ ಸಮುದಾಯ ಭವನಗಳಿಗೆ ಗರಿಷ್ಠ ಸಹಾಯಧನ ರೂ 25.00 ಲಕ್ಷ ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ನಿರ್ಮಾಣ ಮಾಡುವ ಸಮುದಾಯ ಭವನಗಳಿಗೆ ರೂ 10.00ಲಕ್ಷ ಗರಿಷ್ಠ ಸಹಾಯಧನ ಮಂಜೂರು ಮಾಡಲು ನಿಗಧಿಪಡಿಸಲಾಗಿರುತ್ತದೆ ಹಾಗೂ ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುದಾನ ಹೆಚ್ಚಿಸಲು ಅವಕಾಶ ಕಲ್ಪಿಸಲಾಗಿದೆ. ಮಾರ್ಗಸೂಚಿಗಳನುಸಾರ 3 ಕಂತುಗಳಲ್ಲಿ ಅನುದಾನ ಬಿಡುಗಡೆ ಮಾಡುತ್ತಿದ್ದು, ಸಂಘ-ಸಂಸ್ಥೆಗಳು ಸಲ್ಲಿಸುವ ದಾಖಲಾತಿ ಹಾಗೂ ಪ್ರಗತಿಯನ್ನಾಧರಿಸಿ ಲಭ್ಯವಿರುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಸಂ: ಹಿಂವಕ 1296 ಬಿಎಂಎಸ್ 2018

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಟಿ. ರಘುಮೂರ್ತಿ (ಚಳ್ಳಕೆರೆ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 2202 ಕ್ಕೆ ಉತ್ತರ

ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಚಳ್ಳಕೆರೆ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಕನಕ ಭವನ, ಶ್ರೀ ಕೃಷ್ಣಭವನಗಳ ಕಟ್ಟಡಗಳ ನಿರ್ಮಾಣಕ್ಕೆ ಬಿಡುಗಡೆ ಮಾಡಿರುವ ಅನುದಾನ ಮತ್ತು ಕಟ್ಟಡ ಪ್ರಗತಿ ವಿವರಗಳು

ಕ್ರ ಸಂ	ಸಂಸ್ಥೆಯ ಹೆಸರು ಮತ್ತಿ ವಿಳಾಸ	ವಿಧಾನಸಭಾ ಕ್ಷೇತ್ರ	ಮಂಜೂರಾತಿ ವರ್ಷ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಜಾತಿ/ ಪ್ರವರ್ಗ	ಮಂಜೂರಾದ ಮೊತ್ತ	ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಮೊತ್ತ	ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಸಂಸ್ಥೆಗೆ ಬಿಡುಗಡೆಗೆ ಪಿ.ಡಿ ಖಾತೆಯಲ್ಲಿ ಬಾಕಿ ಇರುವ ಮೊತ್ತ	ಕಟ್ಟಡದ ಕಾಮಗಾರಿ ಪ್ರಗತಿ ಹಂತ	ಷರಾ
1	ಚಳ್ಳಕೆರೆ ನಗರದಲ್ಲಿ ಶ್ರೀ ಕೃಷ್ಣ (ಯಾದವ) ಭವನ, ಚಳ್ಳಕೆರೆ	ಚಳ್ಳಕೆರೆ	2015-16	ಶ್ರೀ ಕೃಷ್ಣ ಸಮುದಾಯ ಭವನ	ಯಾದವ	50.00	50.00	50.00	-	ಪ್ರಗತಿಯಲ್ಲಿದೆ	ಕೆಆರ್‌ಐಡಿಎಲ್ ಇವರಿಗೆ ವಹಿಸಿದೆ.
2	ಗೋಲ್ಲತ್ತು ಗ್ರಾಮದಲ್ಲಿ ಕನಕ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ	ಚಳ್ಳಕೆರೆ	2015-16	ಕನಕ ಸಮುದಾಯ ಭವನ	ಕುರುಬ 2ಎ	12.00	3.00	-	3.00	ಪ್ರಗತಿಯಲ್ಲಿದೆ	ಕೆಆರ್‌ಐಡಿಎಲ್ ಚಿತ್ರದುರ್ಗ ಇವರಿಗೆ ವಹಿಸಿದೆ.
3	ಟಿ.ಎನ್ ಕೋಟೆ ಗ್ರಾಮದಲ್ಲಿ ಗುರು ರೇವಣಸಿದ್ದೇಶ್ವರ ಕನಕ ಭವನ ನಿರ್ಮಾಣಕ್ಕೆ	ಚಳ್ಳಕೆರೆ	2015-16	ಕನಕ ಸಮುದಾಯ ಭವನ	ಕುರುಬ 2ಎ	12.00	3.00	3.00	-	ಪ್ರಗತಿಯಲ್ಲಿದೆ	ಕೆಆರ್‌ಐಡಿಎಲ್ ಚಿತ್ರದುರ್ಗ ಇವರಿಗೆ ವಹಿಸಿದೆ.
4	ಓಬೇನಹಳ್ಳಿ ಗ್ರಾಮದಲ್ಲಿ ಕನಕ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ	ಚಳ್ಳಕೆರೆ	2015-16	ಕನಕ ಸಮುದಾಯ ಭವನ	ಕುರುಬ 2ಎ	12.00	3.00	3.00	-	ಪ್ರಗತಿಯಲ್ಲಿದೆ	ಕೆಆರ್‌ಐಡಿಎಲ್ ಚಿತ್ರದುರ್ಗ ಇವರಿಗೆ ವಹಿಸಿದೆ.
5	ಕಲಮರಹಳ್ಳಿ ಗ್ರಾಮದಲ್ಲಿ ಬೀರಲಿಂಗೇಶ್ವರ ದೇವಸ್ಥಾನದ ಕನಕ ಭವನ ಕಟ್ಟಡ ನಿರ್ಮಾಣಕ್ಕೆ	ಚಳ್ಳಕೆರೆ	2015-16	ಕನಕ ಸಮುದಾಯ ಭವನ	ಕುರುಬ 2ಎ	12.00	3.00	3.00	-	ಪ್ರಗತಿಯಲ್ಲಿದೆ	ಕೆಆರ್‌ಐಡಿಎಲ್ ಚಿತ್ರದುರ್ಗ ಇವರಿಗೆ ವಹಿಸಿದೆ.
6	ಚಳ್ಳಕೆರೆ ತುರುವನೂರು ಹೋಬಳಿ ಕೇಂದ್ರದಲ್ಲಿ ಕನಕ ಸಮುದಾಯ ಭವನ	ಚಳ್ಳಕೆರೆ	2015-16	ಕನಕಸಮುದಾಯ ಭವನ	ಕುರುಬ 2ಎ	40.00	10.00	-	10.00	ಪ್ರಗತಿಯಲ್ಲಿದೆ	ಕೆಆರ್‌ಐಡಿಎಲ್ ಚಿತ್ರದುರ್ಗ ಇವರಿಗೆ ವಹಿಸಿದೆ.
	ಒಟ್ಟು ಮೊತ್ತ					138.00	72.00	59.00	13.00		

ಕರ್ನಾಟಕ ಸರ್ಕಾರ

ಸಂಖ್ಯೆ:ಹಿಂವಕ 1291 ಬಿಸಿಎ/ಬಿಇಟಿ/ಬಿಎಂಎಸ್ 2018

ಕರ್ನಾಟಕ ಸರ್ಕಾರ ಸಚಿವಾಲಯ,
ಸುವರ್ಣಸೌಧ,
ಬೆಳಗಾವಿ, ದಿನಾಂಕ:19-12-2018

198
615
21/12/18

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಸುವರ್ಣಸೌಧ, ಬೆಳಗಾವಿ.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು,
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:	ಶ್ರೀ/ಶ್ರೀಮತಿ [handwritten name] ,ಮಾನ್ಯ ವಿಧಾನಸಭೆ/ ವಿಧಾನ ಪರಿಷತ್ತು ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ/ನಿಯಮ ಪ್ರಶ್ನೆ ಸಂಖ್ಯೆ: 2243 ಕ್ಕೆ ಉತ್ತರಿಸುವ ಕುರಿತು.
ಉಲ್ಲೇಖ:	

-- --

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀ/ಶ್ರೀಮತಿ [handwritten name] __________, **ಮಾನ್ಯ ವಿಧಾನ ಸಭೆ/ವಿಧಾನ ಪರಿಷತ್ತು** ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ **ಗುರುತಿಲ್ಲದ/ ನಿಯಮ ಪ್ರಶ್ನೆ ಸಂಖ್ಯೆ:** 2243 **ಕ್ಕೆ** ಸಂಬಂಧಿಸಿದಂತೆ **ಉತ್ತರದ** 150 **ಪ್ರತಿಗಳನ್ನು** ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಆರ್. ಭಾಸ್ಕರ್),
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2243
ಮಾನ್ಯ ಸದಸ್ಯರ ಹೆಸರು	ಶ್ರೀ ದೊಡ್ಡನಗೌಡ ಜಿ. ಪಾಟೀಲ್ (ಹುನಗುಂದ)
ಉತ್ತರಿಸಬೇಕಾದ ದಿನಾಂಕ	21.12.2018
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ಎಷ್ಟು ಹಿಂದುಳಿದ ವರ್ಗ/ಜಾತಿಗಳ ಸಮುದಾಯದ ಅಭ್ಯುದಯಕ್ಕಾಗಿ ಗರಿಷ್ಠ ಅನುದಾನವನ್ನು ಹಾಗೂ ನಿವೇಶನ/ಭೂಮಿ ನೀಡಲಾಗಿರುತ್ತದೆ;	ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಪ್ರವರ್ಗ-1, 2ಎ ಹಾಗೂ 3ಬಿ ವರ್ಗಗಳಿಗೆ ಸೇರಿದ ಸಂಘ-ಸಂ ಸಮುದಾಯ ಭವನ/ವಿದ್ಯಾರ್ಥಿನಿಲಯ ಕಟ್ಟಡಗಳ ನಿಮ ಅನುದಾನ ಮಂಜೂರು ಮಾಡಲಾಗುತ್ತಿದ್ದು, ಕಳೆದ ವರ್ಷಗಳಲ್ಲಿ ಗರಿಷ್ಠ ಅನುದಾನ ನೀಡಿರುವ ಸಂಘ-ಸ ವಿವರಗಳು **www.backward classes.kar.nic.** ಲಭ್ಯವಿರುತ್ತದೆ. ಸರ್ಕಾರದ ಆದೇಶ ದಿನಾಂಕ:05.11.2014 ರನ್ವಯ ನಿ ಭೂಮಿ ಖರೀದಿ ಮಾಡುವ ಸಂಬಂಧ ಸಹಾ ಮಂಜೂರು ಮಾಡಲು ಅವಕಾಶ ಇರುವುದಿಲ್ಲ. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ವತಿಯಿಂದ ಹಿಂದುಳಿದ ವರ್ಗ/ ಸಮುದಾಯಗಳ ಅಭ್ಯುದಯ ಕ್ಕಾಗಿ ಅನುದಾನ ನಿವೇಶನ/ಭೂಮಿ ನೀಡುವ ಯಾವುದೇ ಯೋಜ ಅನುಷ್ಠಾನಗೊಳಿಸುತ್ತಿರುವುದಿಲ್ಲ.
ಆ)	50 ಲಕ್ಷಕ್ಕೂ ಮೇಲ್ಪಟ್ಟು ನೀಡಿರುವ ಇಂತಹ ಹಿಂದುಳಿದ ಸಂಸ್ಥೆ/ಸಮುದಾಯ/ಮಠಗಳು ಯಾವುವು;	ಕಳೆದ ಮೂರು ವರ್ಷಗಳಲ್ಲಿ 50 ಲಕ್ಷಕ್ಕೂ ಮೇಲ್ಪಟ್ಟು ಅ ನೀಡಿರುವ ಸಂಘ-ಸಂಸ್ಥೆಗಳ ವಿವರಗಳು **www.bac classes.kar.nic.in** ರಲ್ಲಿ ಲಭ್ಯವಿರುತ್ತದೆ.
ಇ)	ಬೆಂಗಳೂರು ಸುತ್ತಮುತ್ತಲು ಕಂದಾಯ/ಅರಣ್ಯ ಪರಿವರ್ತಿಸಿದ ಪ್ರದೇಶವನ್ನು ಗುರುತಿಸಿ ಆ ಜಾಗವನ್ನು ಇಂತಹ ಹಿಂದುಳಿದ ಪ್ರಮುಖ ಜಾತಿ/ಸಮುದಾಯ/ಮಠಕ್ಕೆ ನೀಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ವಿವರ ಒದಗಿಸುವುದು;	ಬೆಂಗಳೂರು ಸುತ್ತಮುತ್ತಲು ಕಂದಾಯ/ಅರಣ್ಯ ಪರಿ ಪ್ರದೇಶವನ್ನು ಗುರುತಿಸಿ ಈ ಜಾಗವನ್ನು ಇಂತಹ ಹಿ ಪ್ರಮುಖ ಜಾತಿ/ಸಮುದಾಯ/ಮಠಕ್ಕೆ ನೀಡುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಇರು
ಉ)	ಸದರಿ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಎಷ್ಟು ವರ್ಷಗಳ ಅವಧಿಗೆ ಯಾವ ಬೆಲೆಗೆ ನೀಡಲಾಗುವುದು ?	ಅನ್ವಯಿಸುವುದಿಲ್ಲ.

ಸಂ: ಹಿಂವಕ 1291 ಬಿಎಂಎಸ್ 2018

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಸಕಇ 390 SLP 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ.
ಬೆಳಗಾವಿ. ದಿನಾಂಕ:20 -12-2018

<u>ಇವರಿಂದ:</u>

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು.
ಸಮಾಜ ಕಲ್ಯಾಣ ಇಲಾಖೆ.
ಬೆಳಗಾವಿ.

<u>ಇವರಿಗೆ:</u>

ಕಾರ್ಯದರ್ಶಿ.
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~.
ಸುವರ್ಣಸೌಧ.
ಬೆಳಗಾವಿ.

M!
US
21/12/18

ಮಾನ್ಯರೇ.

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/ಶ್ರೀಮತಿ...C.T. ರವಿ..................................... ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2227ನಿಯಮ-73/ /ಗ.ಸೆ.ಸೂ-351 ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ. ಮಾನ್ಯ ವಿಧಾನ ಸಭೆ/ಪರಿಷತ್ ಸದಸ್ಯರಾದ ಶ್ರೀ/ಶ್ರೀಮತಿ...C.T. ರವಿ.............................. ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ:2227 ~~/ನಿಯಮ-73/ /ಗ.ಸೆ.ಸೂ-351~~ಕ್ಕೆ ಸಂಬಂಧಿಸಿದ ಉತ್ತರದ 200.. ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ. ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ.

ಶಾಖಾಧಿಕಾರಿ.
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2227
ಸದಸ್ಯರ ಹೆಸರು : ಶ್ರೀ ಸಿ.ಟಿ.ರವಿ
ಉತ್ತರಿಸುವ ದಿನಾಂಕ : 21-12-2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಚಿಕ್ಕಮಗಳೂರು ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಒದಗಿಸಿರುವ ಅನುದಾನವೆಷ್ಟು;</td><td>ಚಿಕ್ಕಮಗಳೂರು ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಿರುವ ಅನುದಾನದ ವಿವರ ಈ ಕೆಳಕಂಡಂತಿದೆ.
(ರೂ ಲಕ್ಷಗಳಲ್ಲಿ)
<table>
<tr><th>ವರ್ಷ</th><th>2015-16</th><th>2016-17</th><th>2017-18</th></tr>
<tr><td>ಪರಿಶಿಷ್ಟ ಜಾತಿ</td><td>3065.51</td><td>4360.85</td><td>5523.47</td></tr>
<tr><td>ಪರಿಶಿಷ್ಟ ಪಂಗಡ</td><td>661.72</td><td>699.62</td><td>847.05</td></tr>
</table></td></tr>
<tr><td>ಆ)</td><td>ಖರ್ಚಾಗಿರುವ ಅನುದಾನವೆಷ್ಟು:
ಖರ್ಚಾಗದೆ ಉಳಿದಿರುವ ಅನುದಾನವೆಷ್ಟು:</td><td>ವಿವರಗಳು ಈ ಕೆಳಕಂಡಂತಿದೆ.
(ರೂ ಲಕ್ಷಗಳಲ್ಲಿ)
<table>
<tr><th></th><th colspan="2">2015-16</th><th colspan="2">2016-17</th><th colspan="2">2017-18</th></tr>
<tr><th></th><th>ಖರ್ಚು</th><th>ಉಳಿಕೆ</th><th>ಖರ್ಚು</th><th>ಉಳಿಕೆ</th><th>ಖರ್ಚು</th><th>ಉಳಿಕೆ</th></tr>
<tr><td>ಪರಿಶಿಷ್ಟ ಜಾತಿ</td><td>3007.39</td><td>58.12</td><td>4309.73</td><td>51.12</td><td>5449.19</td><td>74.28</td></tr>
<tr><td>ಪರಿಶಿಷ್ಟ ಪಂಗಡ</td><td>624.92</td><td>36.80</td><td>676.76</td><td>22.86</td><td>762.61</td><td>84.43</td></tr>
</table></td></tr>
<tr><td>ಇ)</td><td>ಅನುದಾನ ಖರ್ಚಾಗದೆ ಉಳಿಕೆಯಾಗಲು ಕಾರಣಗಳೇನು?</td><td>ಅನುದಾನ ಖರ್ಚಾಗದೆ ಉಳಿಕೆಯಾಗಲು ಕಾರಣಗಳು:-
1. ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಹೆಚ್ಚಾಗಿರುವುದರಿಂದ ವೇತನಕ್ಕಾಗಿ ನಿಗದಿ ಪಡಿಸಿದ ಅನುದಾನವು ಉಳಿಕೆಯಾಗಿರುತ್ತದೆ.
2. ಕೆಲವು ವಿದ್ಯಾರ್ಥಿ ನಿಲಯಗಳಿಗೆ ಮಂಜೂರಾತಿ ಸಂಖ್ಯೆಗಿಂತ ಕಡಿಮೆ ವಿದ್ಯಾರ್ಥಿಗಳು ದಾಖಲಾದ ಕಾರಣ, ನಿರ್ವಹಣಾ ವೆಚ್ಚವು ಉಳಿದಿರುತ್ತದೆ.
3. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ಕಡಿಮೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರಿಂದ ಈ ಉದ್ದೇಶಕ್ಕಾಗಿ ನಿಗಡಿಪಡಿಸಿದ ಅನುದಾನ ಪೂರ್ಣವಾಗಿ ವೆಚ್ಚವಾಗಿರುವುದಿಲ್ಲ.</td></tr>
</table>

ಈ)	ಎಷ್ಟು ಹಣವನ್ನು ಸರ್ಕಾರದಿಂದ ವಾಪಸ್ ಪಡೆಯಲಾಗಿದೆ: ವಾಪಸ್ ಪಡೆಯಲು ಕಾರಣಗಳೇನು? (ವಿವರ ಒದಗಿಸುವುದು)	ಕಳೆದ 3 ವರ್ಷಗಳಲ್ಲಿ ಯಾವುದೇ ಅನುದಾನವನ್ನು ವಾಪಸ್ ಪಡೆದಿರುವುದಿಲ್ಲ.

ಸಕಇ 390 ಎಸ್‌ಎಲ್‌ಪಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2225
ಸದಸ್ಯರ ಹೆಸರು : ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ
ಉತ್ತರಿಸುವ ದಿನಾಂಕ : 21-12-2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿರುವ ಹಿರಿಯ ಸಹಾಯಕ ನಿರ್ದೇಶಕ, ಸಹಾಯಕ ನಿರ್ದೇಶಕ ಅಧಿಕಾರಿಗಳ ಹುದ್ದೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)	ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರು ಗ್ರೇಡ್-1 -80 ಮತ್ತು ಸಹಾಯಕ ನಿರ್ದೇಶಕರ ಗ್ರೇಡ್-2 -96 ಹುದ್ದೆಗಳು ಮಂಜೂರಾಗಿವೆ. ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	ಮಂಜೂರಾದ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳು ಪ್ರಸ್ತುತ ಖಾಲಿ ಇವೆ; (ತಾಲ್ಲೂಕುವಾರು ಮಾಹಿತಿ ನೀಡುವುದು)	ಮಂಜೂರಾದ ಹುದ್ದೆಗಳಲ್ಲಿ ತಾಲ್ಲೂಕುವಾರು ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು ಪರಿಷ್ಕರಣೆಯಲ್ಲಿದೆ. ಪರಿಷ್ಕರಣೆ ನಂತರ ಕ್ರಮವಹಿಸಲಾಗುತ್ತದೆ.

ಸಕಇ 543 ಪಕಸೇ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2225 ಗೆ ಅನುಬಂಧ

ಕ್ರ. ಸಂ	ಹುದ್ದೆಯ ಹೆಸರು	ಜಿಲ್ಲೆ/ತಾಲ್ಲೂಕಿನ ಹೆಸರು	ಮಂಜೂರಾತಿ	ಭರ್ತಿ	ಖಾಲಿ
	ಬೆಂಗಳೂರು (ನಗರ) ಜಿಲ್ಲೆ				
1	ಸ.ನಿ. ಗ್ರೇಡ್-1	ಆನೇಕಲ್	1	1	0
2	ಸ.ನಿ. ಗ್ರೇಡ್-1	ಬೆಂಗಳೂರು ಉತ್ತರ	1	1	0
3	ಸ.ನಿ. ಗ್ರೇಡ್-1	ಬೆಂಗಳೂರು ದಕ್ಷಿಣ	1	1	0
4	ಸ.ನಿ. ಗ್ರೇಡ್-1	ಬೆಂಗಳೂರು ಪೂರ್ವ	1	0	1
	ಬೆಂಗಳೂರು(ಗ್ರಾ) ಜಿಲ್ಲೆ				
5	ಸ.ನಿ. ಗ್ರೇಡ್-1	ದೇವನಹಳ್ಳಿ	1	1	0
6	ಸ.ನಿ. ಗ್ರೇಡ್-1	ದೊಡ್ಡಬಳ್ಳಾಪುರ	1	1	0
7	ಸ.ನಿ. ಗ್ರೇಡ್-2	ಹೊಸಕೋಟೆ	1	1	0
8	ಸ.ನಿ. ಗ್ರೇಡ್-2	ನೆಲಮಂಗಲ	1	1	0
	ರಾಮನಗರ ಜಿಲ್ಲೆ				
9	ಸ.ನಿ. ಗ್ರೇಡ್-1	ರಾಮನಗರ	1	1	0
10	ಸ.ನಿ. ಗ್ರೇಡ್-1	ಕನಕಪುರ	1	1	0
11	ಸ.ನಿ. ಗ್ರೇಡ್-2	ಚನ್ನಪಟ್ಟಣ	1	1	0
12	ಸ.ನಿ. ಗ್ರೇಡ್-2	ಮಾಗಡಿ	1	1	0
	ಚಿತ್ರದುರ್ಗ ಜಿಲ್ಲೆ				
13	ಸ.ನಿ. ಗ್ರೇಡ್-1	ಚಿತ್ರದುರ್ಗ	1	1	0
14	ಸ.ನಿ. ಗ್ರೇಡ್-1	ಚಳ್ಳಕೆರೆ	1	1	0
15	ಸ.ನಿ. ಗ್ರೇಡ್-1	ಹಿರಿಯೂರು	1	1	0
16	ಸ.ನಿ. ಗ್ರೇಡ್-2	ಹೊಳಲ್ಕೆರೆ	1	1	0
17	ಸ.ನಿ. ಗ್ರೇಡ್-2	ಹೊಸದುರ್ಗ	1	1	0
18	ಸ.ನಿ. ಗ್ರೇಡ್-2	ಮೊಳಕಾಲ್ಮೂರು	1	0	1
	ದಾವಣಗೆರೆ ಜಿಲ್ಲೆ				
19	ಸ.ನಿ. ಗ್ರೇಡ್-1	ದಾವಣಗೆರೆ	1	1	0
20	ಸ.ನಿ. ಗ್ರೇಡ್-1	ಚನ್ನಗಿರಿ	1	1	0
21	ಸ.ನಿ. ಗ್ರೇಡ್-1	ಹರಪನಹಳ್ಳಿ	1	1	0
22	ಸ.ನಿ. ಗ್ರೇಡ್-2	ಹರಿಹರ	1	1	0
23	ಸ.ನಿ. ಗ್ರೇಡ್-2	ಹೊನ್ನಾಳಿ	1	1	0
24	ಸ.ನಿ. ಗ್ರೇಡ್-2	ಜಗಳೂರು	1	1	0
	ಕೋಲಾರ ಜಿಲ್ಲೆ				
25	ಸ.ನಿ. ಗ್ರೇಡ್-1	ಕೋಲಾರ	1	0	1
26	ಸ.ನಿ. ಗ್ರೇಡ್-1	ಬಂಗಾರಪೇಟೆ	1	0	1
27	ಸ.ನಿ. ಗ್ರೇಡ್-1	ಮಾಲೂರು	1	0	1
28	ಸ.ನಿ. ಗ್ರೇಡ್-1	ಮುಳಬಾಗಿಲು	1	0	1
29	ಸ.ನಿ. ಗ್ರೇಡ್-2	ಶ್ರೀನಿವಾಸಪುರ	1	1	0

ಕ್ರ. ಸಂ	ಹುದ್ದೆಯ ಹೆಸರು	ಜಿಲ್ಲೆ/ತಾಲ್ಲೂಕಿನ ಹೆಸರು	ಮಂಜೂರಾತಿ	ಭರ್ತಿ	ಖಾಲಿ
ಚಿಕ್ಕಬಳ್ಳಾಪುರ ಜಿಲ್ಲೆ					
30	ಸ.ನಿ. ಗ್ರೇಡ್-1	ಚಿಕ್ಕಬಳ್ಳಾಪುರ	1	0	1
31	ಸ.ನಿ. ಗ್ರೇಡ್-1	ಚಿಂತಾಮಣಿ	1	0	1
32	ಸ.ನಿ. ಗ್ರೇಡ್-1	ಗೌರಿಬಿದನೂರು	1	0	1
33	ಸ.ನಿ. ಗ್ರೇಡ್-2	ಬಾಗೇಪಲ್ಲಿ	1	1	0
34	ಸ.ನಿ. ಗ್ರೇಡ್-2	ಗುಡಿಬಂಡೆ	1	0	1
35	ಸ.ನಿ. ಗ್ರೇಡ್-2	ಶಿಡ್ಲಘಟ್ಟ	1	1	0
ತುಮಕೂರು ಜಿಲ್ಲೆ.					
36	ಸ.ನಿ. ಗ್ರೇಡ್-1	ತುಮಕೂರು	1	1	0
37	ಸ.ನಿ. ಗ್ರೇಡ್-1	ಮಧುಗಿರಿ	1	1	0
38	ಸ.ನಿ. ಗ್ರೇಡ್-1	ಪಾವಗಡ	1	1	0
39	ಸ.ನಿ. ಗ್ರೇಡ್-1	ಶಿರಾ	1	1	0
40	ಸ.ನಿ. ಗ್ರೇಡ್-2	ಚಿಕ್ಕನಾಯಕನಹಳ್ಳಿ	1	1	0
41	ಸ.ನಿ. ಗ್ರೇಡ್-2	ಗುಬ್ಬಿ	1	1	0
42	ಸ.ನಿ. ಗ್ರೇಡ್-2	ಕೊರಟಗೆರೆ	1	1	0
43	ಸ.ನಿ. ಗ್ರೇಡ್-2	ಕುಣಿಗಲ್	1	1	0
44	ಸ.ನಿ. ಗ್ರೇಡ್-2	ತಿಪಟೂರು	1	1	0
45	ಸ.ನಿ. ಗ್ರೇಡ್-2	ತುರುವೇಕೆರೆ	1	1	0
ಶಿವಮೊಗ್ಗ ಜಿಲ್ಲೆ.					
46	ಸ.ನಿ. ಗ್ರೇಡ್-1	ಶಿವಮೊಗ್ಗ	1	0	1
47	ಸ.ನಿ. ಗ್ರೇಡ್-1	ಭದ್ರಾವತಿ	1	1	0
48	ಸ.ನಿ. ಗ್ರೇಡ್-1	ಶಿಕಾರಿಪುರ	1	1	0
49	ಸ.ನಿ. ಗ್ರೇಡ್-2	ಹೊಸನಗರ	1	0	1
50	ಸ.ನಿ. ಗ್ರೇಡ್-2	ಸಾಗರ	1	1	0
51	ಸ.ನಿ. ಗ್ರೇಡ್-2	ಸೊರಬ	1	1	0
52	ಸ.ನಿ. ಗ್ರೇಡ್-2	ತೀರ್ಥಹಳ್ಳಿ	1	1	0
ಮೈಸೂರು ಜಿಲ್ಲೆ					
53	ಸ.ನಿ. ಗ್ರೇಡ್-1	ಮೈಸೂರು	1	1	0
54	ಸ.ನಿ. ಗ್ರೇಡ್-1	ನಂಜನಗೂಡು	1	1	0
55	ಸ.ನಿ. ಗ್ರೇಡ್-1	ಹೆಚ್.ಡಿ. ಕೋಟೆ	1	0	1
56	ಸ.ನಿ. ಗ್ರೇಡ್-1	ಟಿ. ನರಸೀಪುರ	1	0	1
57	ಸ.ನಿ. ಗ್ರೇಡ್-2	ಹುಣಸೂರು	1	1	0
58	ಸ.ನಿ. ಗ್ರೇಡ್-2	ಕೆ.ಆರ್. ನಗರ	1	1	0
59	ಸ.ನಿ. ಗ್ರೇಡ್-2	ಪಿರಿಯಾಪಟ್ಟಣ	1	1	0
ಚಾಮರಾಜನಗರ ಜಿಲ್ಲೆ					
60	ಸ.ನಿ. ಗ್ರೇಡ್-1	ಚಾಮರಾಜನಗರ	1	0	1
61	ಸ.ನಿ. ಗ್ರೇಡ್-1	ಕೊಳ್ಳೇಗಾಲ	1	0	1
62	ಸ.ನಿ. ಗ್ರೇಡ್-2	ಗುಂಡ್ಲುಪೇಟೆ	1	1	0
63	ಸ.ನಿ. ಗ್ರೇಡ್-2	ಯಳಂದೂರು	1	1	0

(4)

ಕ್ರ. ಸಂ	ಹುದ್ದೆಯ ಹೆಸರು	ಜಿಲ್ಲೆ/ತಾಲ್ಲೂಕಿನ ಹೆಸರು	ಮಂಜೂರಾತಿ	ಭರ್ತಿ	ಖಾಲಿ
		ಮಂಡ್ಯ ಜಿಲ್ಲೆ			
64	ಸ.ನಿ. ಗ್ರೇಡ್-1	ಮಂಡ್ಯ	1	1	0
65	ಸ.ನಿ. ಗ್ರೇಡ್-1	ಮಳವಳ್ಳಿ	1	0	1
66	ಸ.ನಿ. ಗ್ರೇಡ್-2	ಕೆ.ಆರ್. ಪೇಟೆ	1	1	0
67	ಸ.ನಿ. ಗ್ರೇಡ್-2	ಮದ್ದೂರು	1	1	0
68	ಸ.ನಿ. ಗ್ರೇಡ್-2	ನಾಗಮಂಗಲ	1	1	0
69	ಸ.ನಿ. ಗ್ರೇಡ್-2	ಪಾಂಡವಪುರ	1	1	0
70	ಸ.ನಿ. ಗ್ರೇಡ್-2	ಶ್ರೀರಂಗಪಟ್ಟಣ	1	1	0
		ಹಾಸನ ಜಿಲ್ಲೆ			
71	ಸ.ನಿ. ಗ್ರೇಡ್-1	ಹಾಸನ	1	1	0
72	ಸ.ನಿ. ಗ್ರೇಡ್-1	ಅರಸೀಕೆರೆ	1	0	1
73	ಸ.ನಿ. ಗ್ರೇಡ್-1	ಬೇಲೂರು	1	0	1
74	ಸ.ನಿ. ಗ್ರೇಡ್-2	ಆಲೂರು	1	1	0
75	ಸ.ನಿ. ಗ್ರೇಡ್-2	ಅರಕಲಗೂಡು	1	1	0
76	ಸ.ನಿ. ಗ್ರೇಡ್-2	ಚನ್ನರಾಯಪಟ್ಟಣ	1	1	0
77	ಸ.ನಿ. ಗ್ರೇಡ್-2	ಹೊಳೇನರಸೀಪುರ	1	1	0
78	ಸ.ನಿ. ಗ್ರೇಡ್-2	ಸಕಲೇಶಪುರ	1	1	0
		ಚಿಕ್ಕಮಗಳೂರು ಜಿಲ್ಲೆ			
79	ಸ.ನಿ. ಗ್ರೇಡ್-1	ಚಿಕ್ಕಮಗಳೂರು	1	1	0
80	ಸ.ನಿ. ಗ್ರೇಡ್-1	ಕಡೂರು	1	1	0
81	ಸ.ನಿ. ಗ್ರೇಡ್-2	ಕೊಪ್ಪ	1	1	0
82	ಸ.ನಿ. ಗ್ರೇಡ್-2	ಮೂಡಿಗೆರೆ	1	1	0
83	ಸ.ನಿ. ಗ್ರೇಡ್-2	ಎನ್.ಆರ್. ಪುರ	1	0	1
84	ಸ.ನಿ. ಗ್ರೇಡ್-2	ಶೃಂಗೇರಿ	1	1	0
85	ಸ.ನಿ. ಗ್ರೇಡ್-2	ತರೀಕೆರೆ	1	1	0
		ಕೊಡಗು ಜಿಲ್ಲೆ			
86	ಸ.ನಿ. ಗ್ರೇಡ್-1	ಮಡಿಕೇರಿ	1	1	0
87	ಸ.ನಿ. ಗ್ರೇಡ್-2	ಸೋಮವಾರಪೇಟೆ	1	1	0
88	ಸ.ನಿ. ಗ್ರೇಡ್-2	ವಿರಾಜಪೇಟೆ (ಪೊನ್ನಂಪೇಟೆ)	1	1	0
		ದಕ್ಷಿಣ ಕನ್ನಡ ಜಿಲ್ಲೆ			
89	ಸ.ನಿ. ಗ್ರೇಡ್-1	ಮಂಗಳೂರು	1	1	0
90	ಸ.ನಿ. ಗ್ರೇಡ್-2	ಬೆಳ್ತಂಗಡಿ	1	1	0
91	ಸ.ನಿ. ಗ್ರೇಡ್-2	ಬಂಟ್ವಾಳ	1	1	0
92	ಸ.ನಿ. ಗ್ರೇಡ್-2	ಪುತ್ತೂರು	1	1	0
93	ಸ.ನಿ. ಗ್ರೇಡ್-2	ಸುಳ್ಯ	1	0	1
		ಉಡುಪಿ ಜಿಲ್ಲೆ			
94	ಸ.ನಿ. ಗ್ರೇಡ್-1	ಉಡುಪಿ	1	1	0
95	ಸ.ನಿ. ಗ್ರೇಡ್-2	ಕುಂದಾಪುರ	1	0	1
96	ಸ.ನಿ. ಗ್ರೇಡ್-2	ಕಾರ್ಕಳ	1	1	0

ಕ್ರ. ಸಂ	ಹುದ್ದೆಯ ಹೆಸರು	ಜಿಲ್ಲೆ/ತಾಲ್ಲೂಕಿನ ಹೆಸರು	ಮಂಜೂರಾತಿ	ಭರ್ತಿ	ಖಾಲಿ
		ಬೆಳಗಾವಿ ಜಿಲ್ಲೆ			
97	ಸ.ನಿ. ಗ್ರೇಡ್-1	ಬೆಳಗಾವಿ	1	0	1
98	ಸ.ನಿ. ಗ್ರೇಡ್-1	ಚಿಕ್ಕೋಡಿ	1	0	1
99	ಸ.ನಿ. ಗ್ರೇಡ್-1	ಅಥಣಿ	1	1	0
##	ಸ.ನಿ. ಗ್ರೇಡ್-1	ರಾಯಭಾಗ	1	1	0
101	ಸ.ನಿ. ಗ್ರೇಡ್-2	ಬೈಲಹೊಂಗಲ	1	1	0
##	ಸ.ನಿ. ಗ್ರೇಡ್-2	ಗೋಕಾಕ್	1	1	0
##	ಸ.ನಿ. ಗ್ರೇಡ್-2	ಹುಕ್ಕೇರಿ	1	1	0
##	ಸ.ನಿ. ಗ್ರೇಡ್-2	ಖಾನಾಪುರ	1	1	0
##	ಸ.ನಿ. ಗ್ರೇಡ್-2	ರಾಮದುರ್ಗ	1	1	0
##	ಸ.ನಿ. ಗ್ರೇಡ್-2	ಸವದತ್ತಿ	1	1	0
		ವಿಜಯಪುರ ಜಿಲ್ಲೆ			
##	ಸ.ನಿ. ಗ್ರೇಡ್-1	ಬಸವನಬಾಗೇವಾಡಿ	1	1	0
##	ಸ.ನಿ. ಗ್ರೇಡ್-1	ವಿಜಯಪುರ	1	1	0
##	ಸ.ನಿ. ಗ್ರೇಡ್-1	ಇಂಡಿ	1	1	0
110	ಸ.ನಿ. ಗ್ರೇಡ್-1	ಸಿಂಧಗಿ	1	1	0
111	ಸ.ನಿ. ಗ್ರೇಡ್-2	ಮುದ್ದೇಬಿಹಾಳ	1	1	0
		ಬಾಗಲಕೋಟೆ ಜಿಲ್ಲೆ			
112	ಸ.ನಿ. ಗ್ರೇಡ್-1	ಬಾಗಲಕೋಟೆ	1	1	0
113	ಸ.ನಿ. ಗ್ರೇಡ್-1	ಜಮಖಂಡಿ	1	1	0
114	ಸ.ನಿ. ಗ್ರೇಡ್-2	ಹುನಗುಂದ	1	1	0
115	ಸ.ನಿ. ಗ್ರೇಡ್-2	ಬಾದಾಮಿ	1	1	0
116	ಸ.ನಿ. ಗ್ರೇಡ್-2	ಮುಧೋಳ	1	1	0
117	ಸ.ನಿ. ಗ್ರೇಡ್-2	ಬೀಳಗಿ	1	1	0
		ಧಾರವಾಡ ಜಿಲ್ಲೆ			
118	ಸ.ನಿ. ಗ್ರೇಡ್-1	ಧಾರವಾಡ	1	0	1
119	ಸ.ನಿ. ಗ್ರೇಡ್-1	ಹುಬ್ಬಳ್ಳಿ	1	1	0
##	ಸ.ನಿ. ಗ್ರೇಡ್-2	ಕಲಘಟಗಿ	1	1	0
121	ಸ.ನಿ. ಗ್ರೇಡ್-2	ಕುಂದಗೋಳ	1	1	0
##	ಸ.ನಿ. ಗ್ರೇಡ್-2	ನವಲಗುಂದ	1	1	0
		ಗದಗ ಜಿಲ್ಲೆ			
##	ಸ.ನಿ. ಗ್ರೇಡ್-1	ಗದಗ	1	1	0
##	ಸ.ನಿ. ಗ್ರೇಡ್-2	ಮುಂಡರಗಿ	1	1	0
##	ಸ.ನಿ. ಗ್ರೇಡ್-2	ಶಿರಹಟ್ಟಿ	1	1	0
##	ಸ.ನಿ. ಗ್ರೇಡ್-2	ನರಗುಂದ	1	1	0
##	ಸ.ನಿ. ಗ್ರೇಡ್-2	ರೋಣ	1	0	1

(6)

ಕ್ರ. ಸಂ	ಹುದ್ದೆಯ ಹೆಸರು	ಜಿಲ್ಲೆ/ತಾಲ್ಲೂಕಿನ ಹೆಸರು	ಮಂಜೂರಾತಿ	ಭರ್ತಿ	ಖಾಲಿ
		ಹಾವೇರಿ ಜಿಲ್ಲೆ			
##	ಸ.ನಿ. ಗ್ರೇಡ್-1	ಹಾವೇರಿ	1	0	1
##	ಸ.ನಿ. ಗ್ರೇಡ್-1	ರಾಣಿಬೆನ್ನೂರು	1	1	0
##	ಸ.ನಿ. ಗ್ರೇಡ್-2	ಹಿರೇಕೆರೂರು	1	0	1
131	ಸ.ನಿ. ಗ್ರೇಡ್-2	ಬ್ಯಾಡಗಿ	1	1	0
##	ಸ.ನಿ. ಗ್ರೇಡ್-2	ಸವಣೂರು	1	1	0
##	ಸ.ನಿ. ಗ್ರೇಡ್-2	ಹಾನಗಲ್	1	1	0
##	ಸ.ನಿ. ಗ್ರೇಡ್-2	ಶಿಗ್ಗಾಂವ್	1	1	0
		ಉತ್ತರ ಕನ್ನಡ ಜಿಲ್ಲೆ			
##	ಸ.ನಿ. ಗ್ರೇಡ್-1	ಹೊನ್ನಾವರ	1	0	1
##	ಸ.ನಿ. ಗ್ರೇಡ್-2	ಅಂಕೋಲ	1	1	0
##	ಸ.ನಿ. ಗ್ರೇಡ್-2	ಭಟ್ಕಳ	1	1	0
##	ಸ.ನಿ. ಗ್ರೇಡ್-2	ಹಳಿಯಾಳ	1	1	0
##	ಸ.ನಿ. ಗ್ರೇಡ್-2	ಕಾರವಾರ	1	1	0
##	ಸ.ನಿ. ಗ್ರೇಡ್-2	ಕುಮಟ	1	0	1
141	ಸ.ನಿ. ಗ್ರೇಡ್-2	ಮುಂಡಗೋಡ	1	1	0
##	ಸ.ನಿ. ಗ್ರೇಡ್-2	ಸಿದ್ದಾಪುರ	1	1	0
##	ಸ.ನಿ. ಗ್ರೇಡ್-2	ಶಿರಸಿ	1	1	0
##	ಸ.ನಿ. ಗ್ರೇಡ್-2	ಸೂಪ(ಜೋಯಿಡಾ)	1	1	0
##	ಸ.ನಿ. ಗ್ರೇಡ್-2	ಯಲ್ಲಾಪುರ	1	1	0
		ಕಲಬುರಗಿ ಜಿಲ್ಲೆ			
##	ಸ.ನಿ. ಗ್ರೇಡ್-1	ಕಲಬುರಗಿ	1	1	0
##	ಸ.ನಿ. ಗ್ರೇಡ್-1	ಆಳಂದ	1	1	0
##	ಸ.ನಿ. ಗ್ರೇಡ್-1	ಚಿಂಚೋಳಿ	1	0	1
##	ಸ.ನಿ. ಗ್ರೇಡ್-1	ಚಿತ್ತಾಪುರ	1	0	1
##	ಸ.ನಿ. ಗ್ರೇಡ್-1	ಸೇಡಂ	1	1	0
151	ಸ.ನಿ. ಗ್ರೇಡ್-2	ಅಫ್ಜಲ್‌ಪುರ	1	1	0
##	ಸ.ನಿ. ಗ್ರೇಡ್-2	ಜೇವರ್ಗಿ	1	1	0
		ಯಾದಗಿರಿ ಜಿಲ್ಲೆ			
##	ಸ.ನಿ. ಗ್ರೇಡ್-1	ಶಹಾಪುರ	1	1	0
##	ಸ.ನಿ. ಗ್ರೇಡ್-1	ಸುರಪುರ	1	0	1
##	ಸ.ನಿ. ಗ್ರೇಡ್-1	ಯಾದಗಿರಿ	1	1	0
		ರಾಯಚೂರು ಜಿಲ್ಲೆ			
##	ಸ.ನಿ. ಗ್ರೇಡ್-1	ರಾಯಚೂರು	1	0	1
##	ಸ.ನಿ. ಗ್ರೇಡ್-1	ಲಿಂಗಸಗೂರು	1	1	0
##	ಸ.ನಿ. ಗ್ರೇಡ್-1	ಮಾನ್ವಿ	1	0	1
##	ಸ.ನಿ. ಗ್ರೇಡ್-2	ದೇವದುರ್ಗ	1	1	0
##	ಸ.ನಿ. ಗ್ರೇಡ್-2	ಸಿಂಧನೂರು	1	1	0

ಕ್ರ. ಸಂ	ಹುದ್ದೆಯ ಹೆಸರು	ಜಿಲ್ಲೆ/ತಾಲ್ಲೂಕಿನ ಹೆಸರು	ಮಂಜೂರಾತಿ	ಭರ್ತಿ	ಖಾಲಿ
		ಕೊಪ್ಪಳ ಜಿಲ್ಲೆ			
161	ಸ.ನಿ. ಗ್ರೇಡ್-1	ಕೊಪ್ಪಳ	1	0	1
##	ಸ.ನಿ. ಗ್ರೇಡ್-1	ಗಂಗಾವತಿ	1	0	1
##	ಸ.ನಿ. ಗ್ರೇಡ್-2	ಯಲಬುರ್ಗಾ	1	1	0
##	ಸ.ನಿ. ಗ್ರೇಡ್-2	ಕುಷ್ಟಗಿ	1	1	0
		ಬಳ್ಳಾರಿ ಜಿಲ್ಲೆ			
##	ಸ.ನಿ. ಗ್ರೇಡ್-1	ಬಳ್ಳಾರಿ	1	1	0
##	ಸ.ನಿ. ಗ್ರೇಡ್-1	ಹೊಸಪೇಟೆ	1	1	0
##	ಸ.ನಿ. ಗ್ರೇಡ್-1	ಕೂಡ್ಲಿಗಿ	1	1	0
##	ಸ.ನಿ. ಗ್ರೇಡ್-2	ಹೂವಿನ ಹಡಗಲಿ	1	1	0
##	ಸ.ನಿ. ಗ್ರೇಡ್-2	ಹೆಚ್.ಬಿ. ಹಳ್ಳಿ	1	1	0
##	ಸ.ನಿ. ಗ್ರೇಡ್-2	ಸಂಡೂರು	1	1	0
171	ಸ.ನಿ. ಗ್ರೇಡ್-2	ಸಿರುಗುಪ್ಪ	1	1	0
		ಬೀದರ್ ಜಿಲ್ಲೆ			
##	ಸ.ನಿ. ಗ್ರೇಡ್-1	ಔರಾದ್	1	1	0
##	ಸ.ನಿ. ಗ್ರೇಡ್-1	ಬಸವಕಲ್ಯಾಣ	1	1	0
##	ಸ.ನಿ. ಗ್ರೇಡ್-1	ಬೀದರ್	1	1	0
##	ಸ.ನಿ. ಗ್ರೇಡ್-1	ಹುಮ್ನಾಬಾದ್	1	0	1
##	ಸ.ನಿ. ಗ್ರೇಡ್-2	ಭಾಲ್ಕಿ	1	1	0
	ಒಟ್ಟು		176	138	38

ಕರ್ನಾಟಕ ಸರ್ಕಾರ

ಸಂಖ್ಯೆ:ಪ್ರಇ 156 ಪ್ರವಾವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು ದಿನಾಂಕ:20/12/2018

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ಸುವರ್ಣ ಸೌಧ, ಬೆಳಗಾವಿ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ತಿಪ್ಪಾರೆಡ್ಡಿ ಜಿ. ಹೆಚ್ ರವರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ:125ಕ್ಕೆ ಉತ್ತರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ:125ಕ್ಕೆ ಉತ್ತರದ 350/100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

[ಬಿ.ಎಸ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	125
ಮಾನ್ಯ ಸದಸ್ಯರ ಹೆಸರು	:	ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ)
ವಿಷಯ	:	ಪ್ರವಾಸೋದ್ಯಮ ಇಲಾಖೆ ಕಾಮಗಾರಿಗಳಿಗೆ ಮಂಜೂರಾದ ಮೊತ್ತ
ಉತ್ತರಿಸುವ ದಿನಾಂಕ	:	21.12.2018.
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ದಿನಾಂಕ:01.06.2018 ರಿಂದ ನವೆಂಬರ್ 30ರವರೆಗೆ ಆರ್ಥಿಕ ಇಲಾಖೆಯಿಂದ ಪ್ರವಾಸೋದ್ಯಮ ಇಲಾಖೆಗೆ ಮಂಜೂರಾದ, ಬಿಡುಗಡೆಯಾದ ಹಾಗೂ ಖರ್ಚಾದ ಮೊತ್ತವೆಷ್ಟು; ಯಾವ ಯಾವ ವಿಧಾನ ಸಭಾ ಕ್ಷೇತ್ರಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ; (ಮಾಹಿತಿ ನೀಡುವುದು)	ದಿನಾಂಕ:01.06.2018 ರಿಂದ ನವೆಂಬರ್ 30 ರವರೆಗೆ ಆರ್ಥಿಕ ಇಲಾಖೆಯಿಂದ ಪ್ರವಾಸೋದ್ಯಮ ಇಲಾಖೆಗೆ ಮಂಜೂರಾದ, ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ. ಈ ಅನುದಾನವನ್ನು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆ ಹಾಗೂ ಸಾಮಾನ್ಯ ಯೋಜನೆ ಅಡಿ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸುವುದು ಹಾಗೂ ಪ್ರೌಢಶಾಲಾ ಮಕ್ಕಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ಏರ್ಪಡಿಸಿಸುವುದು, ಪ್ರವಾಸಿ ಮೂಲಸೌಲಭ್ಯಗಳ ಅಭಿವೃದ್ಧಿ, ರಸ್ತೆ ಅಭಿವೃದ್ಧಿ, ಪ್ರವಾಸೋದ್ಯಮ ಪ್ರಚಾರ ಮತ್ತು ಉತ್ತೇಜನ, ಪ್ರವಾಸೋದ್ಯಮ ನೀತಿಯ ಪ್ರಕಾರ ಹೋಟೆಲ್ ಯೋಜನೆಗಳಿಗೆ ಸಹಾಯಧನ ವಿತರಣೆ ಮುಂತಾದ ಯೋಜನೆ/ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗುತ್ತಿದೆ. ಇಲಾಖೆಗೆ ಒದಗಿಸಿರುವ ಅನುದಾನವನ್ನು ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗುತ್ತಿದೆಯೇ ವಿನಃ ಮತಕ್ಷೇತ್ರವಾರು ವೆಚ್ಚ ಮಾಡುತ್ತಿಲ್ಲ.
ಆ)	ಈ ಅವಧಿಯಲ್ಲಿ ಕೈಗೆತ್ತಿಕೊಂಡ ಕಾಮಗಾರಿಗಳೆಷ್ಟು; ಇದಕ್ಕಾಗಿ ನಿಗದಿಪಡಿಸಿದ, ಬಿಡುಗಡೆಯಾದ ಹಾಗೂ ಖರ್ಚಾದ ಹಣವೆಷ್ಟು; (ವಿಧಾನ ಸಭಾ ಕ್ಷೇತ್ರವಾರು, ಆಡಳಿತಾತ್ಮಕ ಅನುಮೋದನೆ ದಿನಾಂಕ, ಟೆಂಡರ್ ಕರೆದ ದಿನಾಂಕ, ಕಾಮಗಾರಿ ಪ್ರಾರಂಭಿಸಿದ ದಿನಾಂಕ, ಕಾಮಗಾರಿ ಪೂರ್ಣಗೊಳಿಸಿದ ದಿನಾಂಕ, ಹಣ ಬಿಡುಗಡೆಯಾದ ದಿನಾಂಕಗಳ ಸಂಪೂರ್ಣ ವಿವರ ನೀಡುವುದು)?	2018-19ನೇ ಸಾಲಿನಲ್ಲಿ ಅನುಮೋದನೆ ಆಗಿರುವ ನೂತನ ಕಾಮಗಾರಿಗಳಿಗೆ ಮಂಜೂರು ಮಾಡಿರುವ ಅನುದಾನ ಹಾಗೂ ಅನುಷ್ಠಾನ ಸಂಸ್ಥೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಿದೆ. ಈ ಕಾಮಗಾರಿಗಳು ನೂತನ ಕಾಮಗಾರಿಗಳಾಗಿರುವುದರಿಂದ ನಿಯಮ ರೀತ್ಯಾ ಪ್ರಾರಂಭಿಸಿ ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಪ್ರಇ 156 ಪ್ರವಾವಿ 2018

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

ಮಾನ್ಯ ವಿಧಾನಸಭೆ ಸದಸ್ಯರ ಹೆಸರು: ಶ್ರೀ ಜಯರಾಮ್ ಎ.ಎಸ್ (ತುರುವೇಕೆರೆ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-125 ಕ್ಕೆ ಅನುಬಂಧ-1

3452-5452-TOURISM BUDGET GRANT & EXPD UP TO 30.11.2018.(Rs in Crores)

Sl. No	3452-TOURISM	Budget 2018-19	1,2 & 3rd Quarter Gr Release	Expd end of 30.11.18.	Treasury	Upload	Total Expd	Balance	3rd Q Release %	Budget Allocation %
1	3452-01-101-0-04-Development of Tourist Centres at Hampi,Belur, Vijayapura Maintenance Expenditure 200-	40.00					0.00	40.00		0%
2	3452-01-800-0-07 Additional Provision for Salaries-6th Pay	0.40					0.00	0.40		0%
3	3452-80-001-0-01-Salary & other expd	4.10	2.70	2.24			2.24	1.86	100%	55%
4	3452-80-104-0-01-Salary & other expd	2.05	1.38	1.28			1.28	0.77	100%	62%
5	3452-80-001-0-03-422-SCSP	0.02	0.01	0.01			0.01	0.01	100%	50%
6	3452-80-104-0-01-051-GE	33.98	16.99	11.68	0.37		12.05	21.93	71%	35%
7	3452-80-104-0-01-059-OE	63.00	31.50	13.94	0.29	9.95	24.18	38.82	77%	38%
8	3452-80-104-0-01-422-SCSP	15.34	11.51	11.51			11.51	3.83	100%	75%
9	3452-80-104-0-01-423-TSP	6.39	4.79	4.79			4.79	1.60	100%	75%
10	3452-80-104-0-04-059-OE	35.00	26.25	17.22	3.00		20.22	14.78	77%	58%
11	3452-80-104-0-04-106 Subsidies	5.00	5.00	3.95	1.00		4.95	0.05	99%	99%
12	3452-01-800-0-08-Additional Provision for Salaries-6th Pay Commission, 002-Pay Officers-37.00,	0.78					0.00	0.78		0%
A	**3452-Revenue Total**	**206.06**	**100.13**	**66.62**	**4.66**	**9.95**	**81.23**	**124.83**	**81%**	**39%**
13	5452-01-190-0-01 190-Investments in Public Sector & other undertakings-211-Investments	80.00					0.00	80.00	0%	0%
14	5452-01-800-0-10-436-NABARD ROAD WORKS	36.49	18.25	15.20			15.20	21.29	83%	42%
15	5452-01-800-0-14-Tourist Infrastructure at Various Places, 132-Capital Expenses	230.00	112.50	107.89	0.52	3.67	112.08	117.92	100%	49%
16	5452-01-800-0-16- Mysuru Haat 059-OE	1.00	0.50				0.00	1.00	0%	0%
17	5452-03-101-0-05-KTVG-132-Capital Expenses-	103.44	51.72	14.75	0.90		15.65	87.79	30%	15%
B	**5452-Capital Total**	**450.93**	**182.97**	**137.84**	**1.42**	**3.67**	**142.93**	**308.00**	**78%**	**32%**
A+B	**A + B = TOTAL**	**656.99**	**283.09**	**204.46**	**6.08**	**13.62**	**224.16**	**432.83**	**79%**	**34%**

ಮಾನ್ಯ ವಿಧಾನಸಭೆ ಸದಸ್ಯರ ಹೆಸರು: ಶ್ರೀ ಜಯರಾಮ್ ಎ.ಎಸ್ (ತುರುವೇಕೆರೆ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ–125 ಕ್ಕೆ ಅನುಬಂಧ–2

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
	ಬೆಂಗಳೂರು ವಿಭಾಗ			
	ಬೆಂಗಳೂರು ನಗರ ಜಿಲ್ಲೆ			
	ಬೆಂಗಳೂರು ದಕ್ಷಿಣ ತಾಲ್ಲೂಕು			
1	ಬೆಂಗಳೂರು ನಗರ ಜಿಲ್ಲೆಯ ದೊಡ್ಡ ಆಲದಮರ ಪ್ರವಾಸಿ ತಾಣದಲ್ಲಿ ವಿದ್ಯುತ್ ಅಲಂಕಾರ, ಪಾದಚಾರಿ ಮಾರ್ಗ ನಿರ್ಮಾಣ, ತಂತಿ ಬೇಲಿ ಅಳವಡಿಕೆ, ಮಕ್ಕಳ ಆಟದ ಅಂಗಳ ನಿರ್ಮಾಣ, ಸುಸಜ್ಜಿತ ಆಸನಗಳ ವ್ಯವಸ್ಥೆ, ವಿಶ್ರಾಂತಿ ಕೊಠಡಿ, ಸಂಪರ್ಕ ರಸ್ತೆ ಮುಂತಾದ ಕಾಮಗಾರಿಗಳು.	100.00	50.00	ಕೆ.ಆರ್.ಐ. ಡಿ.ಎಲ್
2	ಬೆಂಗಳೂರು ದಕ್ಷಿಣ ತಾಲ್ಲೂಕು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಆವರಣದಲ್ಲಿ ಶ್ರೀ ಮಹಾಮೇರು ಪಂಚಗಣಪತಿ ದೇವಾಲಯದ ಬಳಿ ಯಾತ್ರಿನಿವಾಸ ನಿರ್ಮಾಣ.	75.00	50.00	ಕೆ.ಆರ್.ಐ. ಡಿ.ಎಲ್
	ಒಟ್ಟು	175.00	100.00	
	ಬೆಂಗಳೂರು ಗ್ರಾಮಾಂತರ ಜಿಲ್ಲೆ			
	ನೆಲಮಂಗಲ ತಾಲ್ಲೂಕು			
3	ನೆಲಮಂಗಲ ತಾಲ್ಲೂಕಿನ ಶಿವಗಂಗೆ ಬೆಟ್ಟದಲ್ಲಿ ಮೆಟ್ಟಿಲು, ರೈಲಿಂಗ್ಸ್ ಹಾಗೂ ಮುಂತಾದ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿ.	100.00	50.00	ಲೋಕೋಪಯೋಗಿ ಇಲಾಖೆ
4	ನೆಲಮಂಗಲ ತಾಲ್ಲೂಕಿನ ಹನುಮನ ಪಾಳ್ಯಕ್ಕೆ ಕಾಡೇಕರೆನಹಳ್ಳಿ ಮಾರಮ್ಮ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯ ಅಭಿವೃದ್ಧಿ.	25.00	15.00	ಕೆ.ಆರ್.ಐ. ಡಿ.ಎಲ್
	ಒಟ್ಟು	125.00	65.00	

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
	ಚಿಕ್ಕಬಳ್ಳಾಪುರ ಜಿಲ್ಲೆ			
	ಚಿಂತಾಮಣಿ ತಾಲ್ಲೂಕು			
5	ಚಿಂತಾಮಣಿ ನಗರದ ಗೋಪಸಂದ್ರ ಕೆರೆಯಲ್ಲಿ ಪ್ರವಾಸಿಗರ ವಾಯು ವಿಹಾರದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ.	50.00	25.00	ಕೆ.ಆರ್.ಐ.ಡಿ.ಎಲ್
6	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕೈವಾರ ಶ್ರೀ ಯೋಗಿನಾರೇಯಣ ಮಠಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ. (ಕೈವಾರ ಮಸ್ತೇನಹಳ್ಳಿ ರಸ್ತೆ)	150.00	75.00	ಲೋಕೋಪಯೋಗಿ ಇಲಾಖೆ
	ಒಟ್ಟು	200.00	100.00	
	ರಾಮನಗರ ಜಿಲ್ಲೆ			
	ಮಾಗಡಿ ತಾಲ್ಲೂಕು			
7	ಮಾಗಡಿ ತಾಲ್ಲೂಕಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಮೂಲಸೌಲಭ್ಯಗಳ ಅಭಿವೃದ್ಧಿ.	25.00	25.00	ಕೆ.ಆರ್.ಐ.ಡಿ.ಎಲ್
8	ಮಾಗಡಿ ತಾಲ್ಲೂಕು, ಶ್ರೀ ನರಸಿಂಹಸ್ವಾಮಿ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ.	100.00	50.00	ಕೆ.ಆರ್.ಐ.ಡಿ.ಎಲ್
9	ಮಾಗಡಿ ತಾಲ್ಲೂಕಿನಲ್ಲಿ ಸಾವನದುರ್ಗ ಮತ್ತು ಮಂಚನಬೆಲೆ ಹಾಗೂ ಮಾಗಡಿ ಪಟ್ಟಣದಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಸ್ಥಾನ ಈ ತಾಣಗಳಿಗೆ ಸಂಪರ್ಕ ರಸ್ತೆ ಹಾಗೂ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ.	200.00	25.00	ಲೋಕೋಪಯೋಗಿ ಇಲಾಖೆ
	ಚನ್ನಪಟ್ಟಣ ತಾಲ್ಲೂಕು			
10	ಚನ್ನಪಟ್ಟಣ ತಾಲ್ಲೂಕು, ಪುರಾಣ ಪ್ರಸಿದ್ಧ ಬೇವೂರಿನ ಶ್ರೀ ತಿಮ್ಮಪ್ಪಸ್ವಾಮಿ ಬೆಟ್ಟಕ್ಕೆ ರಸ್ತೆ ಅಭಿವೃದ್ಧಿ.	100.00	50.00	ಲೋಕೋಪಯೋಗಿ ಇಲಾಖೆ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
	ಕನಕಪುರ ತಾಲ್ಲೂಕು			
11	ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಚುಂಚಿ ಜಲಪಾತ ಪ್ರದೇಶದಲ್ಲಿ ಪ್ರವಾಸಿಗರ ಸುರಕ್ಷತೆ ಮತ್ತು ಇತರೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ.	100.00	50.00	ಕೆ.ಆರ್.ಐ. ಡಿ.ಎಲ್
	ಒಟ್ಟು	525.00	200.00	
	ದಾವಣಗೆರೆ ಜಿಲ್ಲೆ			
	ಹರಿಹರ ತಾಲ್ಲೂಕು			
12	ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಶ್ರೀ ಮಹರ್ಷಿ ವಾಲ್ಮೀಕಿ ಮಹಾಸಂಸ್ಥಾನ, ರಾಜನಹಳ್ಳಿ ಇಲ್ಲಿ ಡಾರ್ಮಿಟರಿ ನಿರ್ಮಾಣ.	100.00	50.00	ಕೆ.ಆರ್.ಐ. ಡಿ.ಎಲ್
	ಹರಪ್ಪನಹಳ್ಳಿ ತಾಲ್ಲೂಕು			
13	ದಾವಣಗೆರೆ ಜಿಲ್ಲೆ ಹರಪ್ಪನಹಳ್ಳಿ ತಾಲ್ಲೂಕು ಉಚ್ಚಂಗಿ ದುರ್ಗದಲ್ಲಿ ಡಾರ್ಮಿಟರಿ ಸೌಲಭ್ಯ, ಪಾರ್ಕಿಂಗ್, ಶೌಚಾಲಯ, ಮುಂತಾದ ಸೌಲಭ್ಯಗಳ ನಿರ್ಮಾಣ	300.00	150.00	ಕೆ.ಆರ್.ಐ. ಡಿ.ಎಲ್
14	ಹರಪ್ಪನಹಳ್ಳಿ ತಾಲ್ಲೂಕು ಉಚ್ಚಂಗಿ ದುರ್ಗದ ಕೋಟೆಯ ಹರಿಹರ ಬಾಗಿಲಿನಿಂದ ಹಾಲಮ್ಮನ ತೋಪಿನ ವರೆಗೆ ರಸ್ತೆ ನಿರ್ಮಾಣ	100.00	50.00	ಕೆ.ಆರ್.ಐ. ಡಿ.ಎಲ್
	ಒಟ್ಟು	500.00	250.00	
	ತುಮಕೂರು ಜಿಲ್ಲೆ			
	ಕುಣಿಗಲ್ ತಾಲ್ಲೂಕು			
15	ಕುಣಿಗಲ್ ತಾಲ್ಲೂಕಿನ ಶ್ರೀ ಬೆಟ್ಟದ ರಂಗನಾಥ ಸ್ವಾಮಿ ದೇವಸ್ಥಾನದ ಬಳಿ ಮೂಲಭೂತ ಸೌಲಭ್ಯಗಳ ನಿರ್ಮಾಣ	50.00	25.00	ಕೆ.ಆರ್.ಐ. ಡಿ.ಎಲ್

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
16	ಕುಣಿಗಲ್ ತಾಲ್ಲೂಕು, ಜೊತ್ತಗೆರೆ ಹೋಬಳಿ ಮೆಣಸನಹಳ್ಳಿ ಶ್ರೀ ಬೆಟ್ಟದ ರಂಗನಾಥಸ್ವಾಮಿ ದೇವಸ್ಥಾನದ ಬಳಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ.	25.00	15.00	ಕೆ.ಆರ್.ಐ. ಡಿ.ಎಲ್
	ಮಧುಗಿರಿ ತಾಲ್ಲೂಕು			
17	ಮಧುಗಿರಿ ತಾಲ್ಲೂಕು, ಕಸಬಾ ಹೋಬಳಿ, ಸಿದ್ದಾಪೂರ ಕುಡೂತಿ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದ ಬಳಿ ಶೆಲ್ಟರ್ ನಿರ್ಮಾಣ, ಇಂಟರ್ ಲಾಕ್ ಹಾಕುವುದು, ಶೌಚಾಲಯ ನಿರ್ಮಿಸುವುದು.	50.00	25.00	ಕೆ.ಆರ್.ಐ. ಡಿ.ಎಲ್
18	ಮಧುಗಿರಿ ತಾಲ್ಲೂಕು, ಕಸಬಾ ಹೋಬಳಿ, ಸಿದ್ದಾಪೂರ ಚೋಳೇಶ್ವರ ದೇವಸ್ಥಾನದ ಸುತ್ತ ಶೆಲ್ಟರ್ ಹಾಗೂ ಶೌಚಾಲಯ ನಿರ್ಮಾಣ.	50.00	25.00	ಕೆ.ಆರ್.ಐ. ಡಿ.ಎಲ್
19	ಮಧುಗಿರಿ ತಾ॥ ಕಸಬಾ ಹೋಬಳಿ, ಕಂಬತ್ತನಹಳ್ಳಿ ಶ್ರೀ ಲಕ್ಷ್ಮೀ ದೇವಸ್ಥಾನದ ಬಳಿ ಶೆಲ್ಟರ್ ನಿರ್ಮಾಣ. ಇಂಟರ್ ಲಾಕ್ ಹಾಕುವುದು, ಶೌಚಾಲಯ ನಿರ್ಮಾಣ.	50.00	25.00	ಕೆ.ಆರ್.ಐ. ಡಿ.ಎಲ್
	ಗುಬ್ಬಿ ತಾಲ್ಲೂಕು			
20	ಗುಬ್ಬಿ ತಾಲ್ಲೂಕು, ಚೇಳೂರು ಹೋ॥ ಮಾದಾಪುರ ಗ್ರಾಮದ ಶ್ರೀ ಮಣ್ಣಮ್ಮದೇವಿ ದೇವಸ್ಥಾನದ ಬಳಿ ಪ್ರವಾಸಿ ಸೌಲಭ್ಯ ಅಭಿವೃದ್ಧಿ.	50.00	25.00	ಕೆ.ಆರ್.ಐ. ಡಿ.ಎಲ್
21	ಗುಬ್ಬಿ ತಾಲ್ಲೂಕು, ಶ್ರೀ ಗುಡ್ಡದ ರಂಗನಾಥ ಸ್ವಾಮಿ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ಕಟ್ಟಡ.	50.00	25.00	ಕೆ.ಆರ್.ಐ. ಡಿ.ಎಲ್
22	ಗುಬ್ಬಿ ತಾಲ್ಲೂಕು, ಹಾಗಲವಾಡಿ ಹೋ॥ ಹೊನ್ನಾವಳ್ಳಿ ಗ್ರಾಮದ ಅರಣ್ಯ ಪ್ರದೇಶದ ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ.	25.00	25.00	ಕೆ.ಆರ್.ಐ. ಡಿ.ಎಲ್

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
	ಶಿರಾ ತಾಲ್ಲೂಕು			
23	ಶಿರಾದಲ್ಲಿರುವ ಕಸ್ತೂರಿ ರಂಗಪ್ಪ ನಾಯಕ ಕೋಟೆಯ ಸುತ್ತ ಚೈನ್ ಲಿಂಕ್ ಫೆನ್ಸಿಂಗ್, ಮೋಟ್ ಅಭಿವೃದ್ಧಿ, ನೂತನ ಸೇತುವೆ ನಿರ್ಮಾಣ, ಹೊರಭಾಗದಲ್ಲಿ ಗೇಟ್ ನಿರ್ಮಿಸುವುದು, ಕೋಟೆಯ ಪ್ರವೇಶ ಧ್ವಾರದಲ್ಲಿ ನೂತನ ಬಾಗಿಲು ನಿರ್ಮಿಸುವ ಕಾಮಗಾರಿಗಳು.	500.00	250.00	ರಾಜ್ಯ ಪುರಾತತ್ವ ಇಲಾಖೆ, ಮೈಸೂರು
	ತುಮಕೂರು ತಾಲ್ಲೂಕು			
24	ತುಮಕೂರು ಜಿಲ್ಲೆ, ಊರ್ಡಿಗೆರೆ ಹೋಬಳಿ, ದೇವರಾಯದುರ್ಗ ಗ್ರಾಮದ ಶ್ರೀ ಭೋಗಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ ಹಿಂಭಾಗದಲ್ಲಿರುವ ಕಲ್ಯಾಣಿಯ ಪಕ್ಕದಲ್ಲಿ ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕ ಸ್ನಾನದ ಗೃಹ ಮತ್ತು ಶೌಚಾಲಯ ಕುಡಿಯುವ ನೀರು (ಆರ್.ಓ. ಪ್ಲಾಂಟ್) ಅಭಿವೃದ್ಧಿ ಕಾಮಗಾರಿ.	35.00	35.00	ಕೆ.ಆರ್.ಐ. ಡಿ.ಎಲ್
25	ತುಮಕೂರು ಜಿಲ್ಲೆ, ಊರ್ಡಿಗೆರೆ ಹೋಬಳಿ, ದೇವರಾಯದುರ್ಗ ಗ್ರಾಮದ ಶ್ರೀ ಭೋಗಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿರುವ ಮಯೂರ ಮೇಘಧೂತ ಕಟ್ಟಡ ನವೀಕರಣ, ದುರಸ್ತಿ ಮತ್ತು ಫೆನ್ಸಿಂಗ್ (ಸ.ನಂ 8 ರಲ್ಲಿರುವ ಕಟ್ಟಡ)	80.00	50.00	ಲೋಕೋಪಯೋಗಿ ಇಲಾಖೆ
26	ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟಿರುವ ಬೈಲಾಂಜನೇಯ ದೇವಸ್ಥಾನ ಬಳಿ ಮಹಿಳಾ ಮತ್ತು ಪುರುಷರ ಪ್ರತ್ಯೇಕ ಶೌಚಾಲಯ ಮತ್ತು ಸ್ನಾನದ ಗೃಹ ನಿರ್ಮಾಣ ಕಾಮಗಾರಿ	50.00	25.00	ಕೆ.ಆರ್.ಐ. ಡಿ.ಎಲ್
	ಒಟ್ಟು	1015.00	550.00	

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
	ಚಿತ್ರದುರ್ಗ ಜಿಲ್ಲೆ			
	ಚಳ್ಳಕೆರೆ ತಾಲ್ಲೂಕು			
27	ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಶ್ರೀ ತಿಪ್ಪೇರುದ್ರಸ್ವಾಮಿ ದೇವಾಲಯ ಪ್ರದೇಶದಲ್ಲಿ ಹೈಟೆಕ್ ಶೌಚಾಲಯ ಹಾಗೂ ಇತರೆ ಮೂಲಸೌಲಭ್ಯಗಳ ಅಭಿವೃದ್ಧಿ	50.00	25.00	ಕೆ.ಆರ್.ಐ.ಡಿ.ಎಲ್
	ಚಿತ್ರದುರ್ಗ ತಾಲ್ಲೂಕು			
28	ಚಿತ್ರದುರ್ಗದಲ್ಲಿ ಕೋಟೆಯ ಮುಂಭಾಗದಲ್ಲಿರುವ ಇಲಾಖಾ ಜಮೀನಿನಲ್ಲಿ ಪ್ರವಾಸಿ ಮಾಹಿತಿ ಕೇಂದ್ರ, ಪಾರ್ಕಿಂಗ್ ಸೌಲಭ್ಯ, ಲಗೇಜ್ ಕೊಠಡಿ, ಕುಡಿಯುವ ನೀರಿನ ಸೌಲಭ್ಯ, ಪ್ರವಾಸಿಗರಿಗೆ ವಿಶ್ರಾಂತಿ ಸೌಲಭ್ಯಗಳ ನಿರ್ಮಾಣ	200.00	100.00	ಕೆ.ಆರ್.ಐ.ಡಿ.ಎಲ್
29	ಚಿತ್ರದುರ್ಗದಲ್ಲಿರುವ ಸಹಾಯಕ ನಿರ್ದೇಶಕರ ಕಛೇರಿ ಹಾಗೂ ಹೋಟೆಲ್ ಮಯೂರ ಕೆ.ಎಸ್.ಟಿ.ಡಿ.ಸಿ ಗೆ ಕೂಡು ರಸ್ತೆ ಅಭಿವೃದ್ಧಿ	100.00	50.00	ಕೆ.ಆರ್.ಐ.ಡಿ.ಎಲ್
30	ಚಿತ್ರದುರ್ಗ ಜಿಲ್ಲೆಯಲ್ಲಿರುವ ಮಾರಘಟ್ಟ ಗ್ರಾಮದ ಸರ್ವೇ ನಂ ನಲ್ಲಿರುವ ಇಲಾಖಾ ಜಮೀನಿಗೆ ರಕ್ಷಣಾ ಗೋಡೆ ನಿರ್ಮಾಣ	40.00	40.00	ಲೋಕೋಪಯೋಗಿ ಇಲಾಖೆ
	ಒಟ್ಟು	390.00	215.00	
	ಕೋಲಾರ ಜಿಲ್ಲೆ			
	ಕೋಲಾರ ತಾಲ್ಲೂಕು			
31	ಕೋಲಾರ ಜಿಲ್ಲೆ ಅಂತರಗಂಗೆ ಶ್ರೀ ಕಾಶಿವಿಶ್ವೇಶ್ವರ ದೇವಾಲಯ ಸಂಪರ್ಕಿಸುವ ಕೂಡುರಸ್ತೆ ಅಭಿವೃದ್ಧಿ. (ಸಿಮೆಂಟ್ ಕಾಂಕ್ರೀಟ್	50.00	50.00	ಲೋಕೋಪಯೋಗಿ ಇಲಾಖೆ
	ಮಾಲೂರು ತಾಲ್ಲೂಕು			
32	ಮಾಲೂರು ತಾಲ್ಲೂಕು, ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟೇಶ್ವರಸ್ವಾಮಿ ದೇವಾಲಯದ ಬಳಿ ಯಾತ್ರಿನಿವಾಸ, ಉದ್ಯಾನವನ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳು	100.00	50.00	ಕೆ.ಆರ್.ಐ.ಡಿ.ಎಲ್
	ಒಟ್ಟು	150.00	100.00	

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
	ಶಿವಮೊಗ್ಗ ಜಿಲ್ಲೆ			
	ಶಿವಮೊಗ್ಗ ತಾಲ್ಲೂಕು			
33	ಶಿವಮೊಗ್ಗ ಜಿಲ್ಲೆಯ ಕುಂಸಿ ಗ್ರಾಮದಲ್ಲಿರುವ ಶ್ರೀ ವೀರಭದ್ರ ದೇವಸ್ಥಾನದ ಸಂಪರ್ಕ ರಸ್ತೆ ಅಭಿವೃದ್ಧಿ (ಕಾಂಕ್ರೀಟ್ ರಸ್ತೆ)	25.00	25.00	ಕೆ.ಆರ್.ಐ. ಡಿ.ಎಲ್
34	ಶಿವಮೊಗ್ಗ ಜಿಲ್ಲೆ ಕಾಳಕೊಂಡು ಸಪ್ತ ಮಾತೃಕೆಯರ ದೇವಸ್ಥಾನ ಸಂಪರ್ಕಿಸುವ ತೂಗು ಸೇತುವೆ ನಿರ್ಮಾಣ.	100.00	50.00	ಲೋಕೋಪ ಯೋಗಿ ಇಲಾಖೆ
35	ಶಿವಮೊಗ್ಗ ನಗರದ ಶಿವಪ್ಪ ನಾಯಕನ ಕೋಟೆ ಪ್ರದೇಶದಲ್ಲಿ ಹಳೆಯ ಶೌಚಾಲಯ ನೆಲಸಮ ಮಾಡಿ ನೂತನ ಶೌಚಾಲಯ ನಿರ್ಮಾಣ.	30.00	30.00	ಕೆ.ಆರ್.ಐ. ಡಿ.ಎಲ್
	ಭದ್ರಾವತಿ ತಾಲ್ಲೂಕು			
36	ಭದ್ರಾವತಿ ನಗರದಲ್ಲಿರುವ ಇತಿಹಾಸ ಪ್ರಸಿದ್ಧ ಲಕ್ಷ್ಮೀನರಸಿಂಹ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ.	50.00	25.00	ಕೆ.ಆರ್.ಐ. ಡಿ.ಎಲ್
37	ಭದ್ರಾನದಿ ಅಣೆಕಟ್ಟು ಯೋಜನೆ (ಬಿ.ಆರ್.ಪಿ.) ಭದ್ರಾವತಿ ತಾಲ್ಲೂಕು. ಕೃಷ್ಣರಾಜ ಸಾಗರ ಅಣೆಕಟ್ಟೆ ಉದ್ಯಾನವನದ ಮಾದರಿಯಲ್ಲಿ ಉದ್ಯಾನವನ ಹಾಗೂ ಸಂಗೀತ ಕಾರಂಜಿ ನಿರ್ಮಾಣ.	200.00	100.00	ಲೋಕೋಪ ಯೋಗಿ ಇಲಾಖೆ
	ಸಾಗರ ತಾಲ್ಲೂಕು			
38	ಜೋಗ್ ಜಲಪಾತ ಪ್ರದೇಶದಲ್ಲಿ ಕುಡಿಯುವ ನೀರಿನ ಘಟಕ ಸ್ಥಾಪನೆ (ಆರ್.ಓ. ಪ್ಲಾಂಟ್) ಹೈಟೆಕ್ ಶೌಚಾಲಯ, ಆಹಾರ ಮಳಿಗೆ ನಿರ್ಮಾಣ.	230.00	125.00	ಲೋಕೋಪ ಯೋಗಿ ಇಲಾಖೆ
39	ಸಾಗರ ತಾಲ್ಲೂಕು, ಕೆಳದಿಯಲ್ಲಿರುವ ದೇವಾಲಯಗಳ ಪ್ರದೇಶದಲ್ಲಿ ಪ್ರವಾಸಿ ಮೂಲಭೂತ ಸೌಕರ್ಯ ಅಭಿವೃದ್ಧಿ.	50.00	25.00	ಕೆ.ಆರ್.ಐ. ಡಿ.ಎಲ್

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
40	ಸೊರಬ ತಾಲ್ಲೂಕು ಚಂದ್ರಗುತ್ತಿ ದೇವಸ್ಥಾನದ ಪ್ರದೇಶದಲ್ಲಿ ಪ್ರವಾಸಿ ಮೂಲಭೂತ ಸೌಕರ್ಯ ಅಭಿವೃದ್ಧಿ. ಹೈಟೆಕ್ ಶೌಚಾಲಯ ನಿರ್ಮಾಣ	30.00	30.00	ಕೆ.ಆರ್.ಐ. ಡಿ.ಎಲ್
	ಶಿಕಾರಿಪುರ ತಾಲ್ಲೂಕು			
41	ಶಿಕಾರಿಪುರ ತಾಲ್ಲೂಕು, ಬಳ್ಳಿಗಾವಿ ಪ್ರದೇಶದಲ್ಲಿ ಪ್ರವಾಸಿ ಮೂಲಸೌಲಭ್ಯ ಅಭಿವೃದ್ಧಿ.	100.00	50.00	ಲೋಕೋಪ ಯೋಗಿ ಇಲಾಖೆ
42	ಶಿಕಾರಿಪುರ ತಾಲ್ಲೂಕು, ಈಸೂರಿನಲ್ಲಿ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ಗ್ರಾಮದ ಬಳಿ ಉದ್ಯಾನವನ ಮತ್ತು ಸ್ಮಾರಕ ಅಭಿವೃದ್ಧಿ.	25.00	25.00	ಲೋಕೋಪ ಯೋಗಿ ಇಲಾಖೆ
	ಒಟ್ಟು	435.00	255.00	
	ಬೆಂಗಳೂರು ವಿಭಾಗದ ಒಟ್ಟು ಮೊತ್ತ	3920.00	2065.00	
	ಮೈಸೂರು ವಿಭಾಗ			
	ಮೈಸೂರು ಜಿಲ್ಲೆ			
	ಹೆಚ್.ಡಿ.ಕೋಟೆ ತಾಲ್ಲೂಕು			
43	ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು, ಕುಂದೂರು ಶ್ರೀ ಚಿಕ್ಕದೇವಮ್ಮನವರ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯ, ಉದ್ಯಾನವನ ನಿರ್ಮಾಣ.	100.00	50.00	ಕೆ.ಆರ್.ಐ.ಡಿ.ಎಲ್
	ಕೃಷ್ಣರಾಜ ನಗರ ತಾಲ್ಲೂಕು			
44	ಕೃಷ್ಣರಾಜ ನಗರ ತಾಲ್ಲೂಕಿನಲ್ಲಿರುವ ಚುಂಚಿನಕಟ್ಟೆ ಜಲಪಾತದ ಪ್ರದೇಶದಲ್ಲಿ ಚೈನ್‌ಲಿಂಕ್ ಫೆನ್ಸಿಂಗ್ ಚುಂಚನಕಟ್ಟೆ ವೃತ್ತ ಅಭಿವೃದ್ಧಿ ಹಾಗೂ ಪ್ರವೇಶ ದ್ವಾರಕ್ಕೆ ಆರ್ಚ್ ನಿರ್ಮಾಣ, ಉಪಹಾರ ಗೃಹ, ಶೌಚಾಲಯ, ವಾಚ್‌ಟವರ್, ಲ್ಯಾಂಡ್ ಸ್ಕೇಪಿಂಗ್, ಸೋಲಾರ್ ಲೈಟಿಂಗ್, ಕಾರಂಜಿ, ಮಕ್ಕಳ ಆಟದ ಪ್ರದೇಶ, ಜಿಪ್‌ಲೈನ್ ನಿರ್ಮಾಣ ಹಾಗೂ ಸಂಪರ್ಕ ರಸ್ತೆ ಅಭಿವೃದ್ಧಿ	825.00	250.00	ಲೋಕೋಪಯೋಗಿ ಇಲಾಖೆ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
45	ಕೆ.ಆರ್.ನಗರ ತಾಲ್ಲೂಕು ಸಾಲಿಗ್ರಾಮದ ಭಾಸ್ಕರ ಸ್ವಾಮಿ ರಸ್ತೆ ಅಭಿವೃದ್ಧಿ	100.00	50.00	ಲೋಕೋಪಯೋಗಿ ಇಲಾಖೆ
46	ಕೃಷ್ಣರಾಜ ನಗರ ತಾಲ್ಲೂಕಿನಲ್ಲಿರುವ ಶ್ರೀ ಅರ್ಕೇಶ್ವರ ದೇವಸ್ಥಾನದ ಬಳಿ ಸೋಪಾನ ಕಟ್ಟೆ ಯಾತ್ರಿಧಾಮ ಲ್ಯಾಂಡ್ ಸ್ಕೇಪಿಂಗ್ ಮುಂತಾದ ಸೌಲಭ್ಯಗಳ ನಿರ್ಮಾಣ	360.00	150.00	ಲೋಕೋಪಯೋಗಿ ಇಲಾಖೆ
47	ಕೃಷ್ಣರಾಜನಗರ ತಾಲ್ಲೂಕಿನ ಹೆಬ್ಬಾಳು ಹೋಬಳಿಯ ಕಪ್ಪಡಿ ಕ್ಷೇತ್ರದ ರಸ್ತೆ ಅಭಿವೃದ್ಧಿ	200.00	50.00	ಲೋಕೋಪಯೋಗಿ ಇಲಾಖೆ
	ಮೈಸೂರು ತಾಲ್ಲೂಕು			
48	ಮೈಸೂರು ತಾಲ್ಲೂಕಿನ ವರುಣಾ ಕೆರೆಯನ್ನು ಮಾದರಿ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವುದು.	150.00	75.00	ಸಣ್ಣ ನಿರಾವರಿ
49	ಗುಂಗ್ರಾಲ್ ಛತ್ರ ಗ್ರಾಮದ ಈಶ್ವರ ದೇವಾಲಯದ ಬಳಿ ಮೂಲಸೌಲಭ್ಯಗಳ ಅಭಿವೃದ್ಧಿ (ಶೌಚಾಲಯ ಕುಡಿಯುವ ನೀರಿನ ಘಟಕ)	25.00	25.00	ಕೆ.ಆರ್.ಐ.ಡಿ.ಎಲ್
50	ಜೆ.ಡಿ.ಕಟ್ಟೆ ಮಹಾದೇಶ್ವರ ದೇವಾಲಯದ ಆವರಣದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ	25.00	25.00	ಕೆ.ಆರ್.ಐ.ಡಿ.ಎಲ್
51	ಕುಕ್ಕರಹಳ್ಳಿ ಕೆರೆ ಅಭಿವೃದ್ಧಿ	50.00	25.00	ಮೈಸೂರು ವಿಶ್ವವಿದ್ಯಾಲಯ ಇಂಜಿನಿಯರಿಂಗ್ ವಿಭಾಗ
	ನಂಜನಗೂಡು ತಾಲ್ಲೂಕು			
52	ಬದನವಾಳು ಗ್ರಾಮದಲ್ಲಿರುವ ವೀವಿಂಗ್ ಕೇಂದ್ರವನ್ನು ಸಾಬರಮತಿ ಆಶ್ರಮದ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು.	100.00	50.00	ಕೆ.ಆರ್.ಐ.ಡಿ.ಎಲ್
	ಪಿರಿಯಾಪಟ್ಟಣ ತಾಲ್ಲೂಕು			
53	ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾತ್ರಿನಿವಾಸ ನಿರ್ಮಾಣ	200.00	100.00	ಕೆ.ಆರ್.ಐ.ಡಿ.ಎಲ್

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
	ಟಿ. ನರಸೀಪುರ ತಾಲ್ಲೂಕು			
54	ಮೂಗೂರಿನ ಶ್ರೀ ತ್ರಿಪುರ ಸುಂದರಿ ದೇವಾಲಯದ ಬಳಿ ರಾಜಗೋಪುರ ನಿರ್ಮಾಣ ಹಾಗೂ ಇತರೆ ಸಂರಕ್ಷಣಾ ಕಾಮಗಾರಿಗಳು	500.00	100.00	ಪುರಾತತ್ವ ಇಲಾಖೆ
	ಹುಣಸೂರು ತಾಲ್ಲೂಕು			
55	ಹುಣಸೂರು ಕ್ಷೇತ್ರದ ಓಂಕಾರೇಶ್ವರ ಬೆಟ್ಟದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ	25.00	25.00	ಕೆ.ಆರ್.ಐ.ಡಿ.ಎಲ್
56	ಸೋಲನಹಳ್ಳಿ ಭೈರವೇಶ್ವರ ಬೆಟ್ಟದ ಬಳಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ	25.00	25.00	ಕೆ.ಆರ್.ಐ.ಡಿ.ಎಲ್
	ಒಟ್ಟು	2685.00	1000.00	
	ಮಂಡ್ಯ ಜಿಲ್ಲೆ			
	ಮಂಡ್ಯ ತಾಲ್ಲೂಕು			
57	ಮಂಡ್ಯ ತಾಲ್ಲೂಕಿನ ಹೊಸಬೂದನೂರು ಗ್ರಾಮದಲ್ಲಿ ರಾಜ್ಯಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿರುವ 13 ನೇ ಶತಮಾನದ ಹೊಯ್ಸಳರ ಕಾಲದ ಶ್ರೀ ಕಾಶಿ ವಿಶ್ವನಾಥ ಮತ್ತು ಶ್ರೀ ಅನಂತಪದ್ಮನಾಭ ದೇವಾಲಯಗಳ ನಡುವೆ ಆಂತರಿಕ ಸಂಪರ್ಕ ರಸ್ತೆ ಅಭಿವೃದ್ಧಿ	100.00	25.00	ಲೋಕೋಪಯೋಗಿ ಇಲಾಖೆ
58	ಮಂಡ್ಯ ನಗರದ ಗುತ್ತಲಿನಲ್ಲಿರುವ ಶ್ರೀ ಅರ್ಕೇಶ್ವರ ದೇವಾಲಯದ ಬಳಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ.	50.00	25.00	ಕೆ.ಆರ್.ಐ.ಡಿ.ಎಲ್
	ನಾಗಮಂಗಲ ತಾಲ್ಲೂಕು			
59	ನಾಗಮಂಗಲ ತಾಲ್ಲೂಕು ಕುಂಟಾನುಕೊಪ್ಪಲು ಗ್ರಾಮದ ಮುದ್ದೇನಹಟ್ಟಮ್ಮ ದೇವಸ್ಥಾನದ ಬಳಿ ಕುಡಿಯುವ ನೀರು, ಹೈಟೆಕ್ ಶೌಚಾಲಯ ಹಾಗೂ ಇತರೆ ಸೌಲಭ್ಯಗಳ ಅಭಿವೃದ್ಧಿ	50.00	25.00	ಕೆ.ಆರ್.ಐ.ಡಿ.ಎಲ್

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
60	ನಾಗಮಂಗಲ ತಾಲ್ಲೂಕಿನ ಕೋಟೆಬೆಟ್ಟ-ಹರದನಹಳ್ಳಿ-ಮಾರ್ಕೋನಹಳ್ಳಿ ರಸ್ತೆ 0.0 ಕಿ.ಮೀ ಯಿಂದ 7.0 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ.	180.00	75.00	ಲೋಕೋಪಯೋಗಿ ಇಲಾಖೆ
61	ನಾಗಮಂಗಲ ತಾಲೂಕಿನ ಕೋಟೆಬೆಟ್ಟದ ವೆಂಕಟರಮಣ ಸ್ವಾಮಿ ದೇವಾಲಯದ ಮೆಟ್ಟಿಲುಗಳ ದುರಸ್ಥಿ ಮತ್ತಿತರೆ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ.	25.00	25.00	ಕೆ.ಆರ್.ಐ.ಡಿ.ಎಲ್
	ಮಳವಳ್ಳಿ ತಾಲ್ಲೂಕು			
62	ಮಳವಳ್ಳಿ ತಾಲ್ಲೂಕಿನ ಕಸಬಾ ಹೋಬಳಿಯ ಶ್ರೀ ಮತ್ತಿತಾಳೇಶ್ವರ ದೇವಾಲಯದ (ಮುಜರಾಯಿ ಇಲಾಖೆ) ಬಳಿ ಕುಡಿಯುವ ನೀರು, ಶೌಚಾಲಯ ಹಾಗೂ ಮತ್ತಿತರ ಪ್ರವಾಸಿ ಸೌಲಭ್ಯ ಒದಗಿಸುವ ಬಗ್ಗೆ.	50.00	25.00	ಕೆ.ಆರ್.ಐ.ಡಿ.ಎಲ್
63	ಮಳವಳ್ಳಿ ತಾಲೂಕಿನ ಮುತ್ತತ್ತಿ ಪ್ರವಾಸಿ ತಾಣದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ (ಮುಂದುವರೆದ ಸಿ.ಸಿ.ರಸ್ತೆ ಕಾಮಗಾರಿ ಬಾಕ್ಸ್ ಚರಂಡಿ ಕಾಮಗಾರಿಗಳು)	80.00	80.00	ಲೋಕೋಪಯೋಗಿ ಇಲಾಖೆ
64	ಮಳವಳ್ಳಿ ತಾಲೂಕಿನ ಗಗನಚುಕ್ಕಿ ಜಲಪಾತ ಪ್ರದೇಶದಲ್ಲಿ ವಿವಿಧ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ (ಬಜೆಟ್ ಘೋಷಣೆ)	250.00	100.00	ಲೋಕೋಪಯೋಗಿ ಇಲಾಖೆ
	ಮದ್ದೂರು ತಾಲ್ಲೂಕು			
65	ಮದ್ದೂರು ತಾ॥ ಕಾರ್ಕಹಳ್ಳಿ ಶ್ರೀ ಬಸವೇಶ್ವರ ದೇವಸ್ಥಾನದ ಬಳಿ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ,(ಆರ್‌ಓ ಪ್ಲಾಂಟ್)	40.00	30.00	ಕೆ.ಆರ್.ಐ.ಡಿ.ಎಲ್

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
66	ಮದ್ದೂರು ತಾಲೂಕಿನ ಕೊಕ್ಕರೆ ಬೆಳ್ಳೂರಿನಲ್ಲಿ ಪ್ರವಾಸೋದ್ಯಮ ಇಲಾಖೆಯ ಜಮೀನಿನಲ್ಲಿ 5 ಕೊಠಡಿಗಳ ಯಾತ್ರಿನಿವಾಸ, ಕೆಫೆಟೇರಿಯಾ, ಮಕ್ಕಳ ಉದ್ಯಾನವನ, ಪರಿಸರ ಪ್ರವಾಸೋದ್ಯಮ ಪಾರ್ಕ್ ಮುಂತಾದ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ	200.00	100.00	ಲೋಕೋಪಯೋಗಿ ಇಲಾಖೆ
67	ಅರೆತಿಪ್ಪೂರು, ಜೈನಬಸದಿಗೆ ಸೇರುವ ಅರೆತಿಪ್ಪೂರು ಚನ್ನಪಟ್ಟಣ ತಾಲ್ಲೂಕು ಗಡಿ ರಸ್ತೆ ಅಭಿವೃದ್ಧಿ.	100.00	50.00	ಲೋಕೋಪಯೋಗಿ ಇಲಾಖೆ
	ಪಾಂಡವಪುರ ತಾಲ್ಲೂಕು			
68	ಮೇಲುಕೋಟೆಯ ಶ್ರೀ ಚೆಲುವನಾರಾಯಣ ಸ್ವಾಮಿ ದೇವಾಲಯಕ್ಕೆ ಆಗಮಿಸುವ ಪ್ರವಾಸಿಗರಿಗೆ/ಭಕ್ತಾಧಿಗಳಿಗೆ ಅನುಕೂಲಕ್ಕಾಗಿ ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್ ಹಾಗೂ ಇತರೆ ಪ್ರವಾಸಿ ಅಭಿವೃದ್ದಿ ಕಾಮಗಾರಿ	100.00	50.00	ಕೆ.ಆರ್.ಐ.ಡಿ.ಎಲ್
	ಶ್ರೀರಂಗಪಟ್ಟಣ ತಾಲ್ಲೂಕು			
69	ಶ್ರೀರಂಗಪಟ್ಟಣ ತಾಲ್ಲೂಕಿನ ಸಂಗಮ ಬಳಿ ಅಂಗಡಿ ಮಳಿಗೆ ನಿರ್ಮಾಣ ಮಾಡುತ್ತಿರುವ ಸ್ಥಳದಲ್ಲಿ ಪಾರ್ಕಿಂಗ್‌ನ ಮುಂದುವರೆದ ಕಾಮಗಾರಿ, ಪಾರಂಪರಿಕ ಮಾದರಿಯಲ್ಲಿ ಸೋಪಾನಕಟ್ಟೆ ದುರಸ್ಥಿ, ಮೆಟ್ಟಿಲುಗಳ ನಿರ್ಮಾಣ, ಹೆಚ್ಚುವರಿ ವಿದ್ಯುತ್ ಕೆಲಸ, ಪಾಥ್‌ವೇ, ಕುಳಿತುಕೊಳ್ಳುವ ಆಸನಗಳು, ಸೌಂದರೀಕರಣ ಕೆಲಸಗಳು ಮತ್ತು ಪರಗೋಲಗಳ ನಿರ್ಮಾಣ ಹಾಗು ಮತ್ತಿತರ ಪ್ರವಾಸಿ ಸೌಲಭ್ಯ	100.00	50.00	
70	ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀ ರಂಗನಾಥ ದೇವಾಲಯದ ಬಳಿ ಬೇಸಿಗೆ ಅರಮನೆ ಹತ್ತಿರ ರಾಜಾಸೋಪಾನ (ಸೋಪಾನ ಕಟ್ಟೆ) ಮತ್ತು ಬಟ್ಟೆ ಬದಲಾಯಿಸುವ ಕೊಠಡಿ ಹಾಗೂ ಇತರೆ ಪ್ರವಾಸಿ ಅಭಿವೃದ್ಧಿ ಕಾಮಗಾರಿ.	50.00	25.00	

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊತ್ತ	ಅನುಷ್ಠಾನ ಸಂಸ್ಥೆಯ ಹೆಸರು
	ಕೆ.ಆರ್ ಪೇಟೆ ತಾಲ್ಲೂಕು			
71	ಕೆ.ಆರ್.ಪೇಟೆ ತಾಲ್ಲೂಕಿನ ಕಸಬಾ ಹೋಬಳಿಯ ಹೇಮಗಿರಿಯ ಶ್ರೀ ಕಲ್ಯಾಣವೆಂಕಟರಮಣ ದೇವಸ್ಥಾನದ ಹತ್ತಿರ ಉದ್ಯಾನವನ ನಿರ್ಮಾಣ ಮತ್ತು ಇತರೆ ಪ್ರವಾಸಿ ಮೂಲಭೂತ ಸೌಕರ್ಯ ನಿರ್ಮಾಣ	75.00	50.00	ಕೆ.ಆರ್.ಐ.ಡಿ.ಎಲ್
